ಮೈಸೂರ ಗೆಜಿಟ.

ನಂ. 25 ಸರ್ಕಾರದಿಂದ ಪ್ರಕಾಶಿಸಲ್ಪಟ್ಟದ್ದು. ಸನ 1889.

ಬೆಂಗಳೂರು, ಶನಿವಾರ, ಜೂನ್ ತಾ|| 22, ಸನ 1889.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟಿಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಜೋಡ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಟಿಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥತೀ ರಿಪೋರ್ಟುಗಳು; ಫೋಸ್ಟ್ಆಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮಂ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯೂಲೇಷ್ಣಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮಂ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 27ನೇ ಮೇ 1889.

ನಂ. 52.—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟು ಮಂಡ್ಯ ತಾಲ್ಲೂಕಿನ ಗ್ರಾಮಗಳು ಮಂದು ಮೂಗಣಿಯಿಂದ ಮತ್ತೊಂದು ಮೂಗಣಿಗೆ ವರ್ಗಮಾಡಲ್ಪಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತ್ತೆ:–

ನಂ.	ಗ್ರಾಮ.	ಯಾವ ಮೂಗಣಿಯಿಂದ.	ಯಾವ ಮೂಗಣಿಗೆ.
1	ಹುಲಗನಹಳ್ಳಿ	ಮದ್ದೂರಿಂದ	ಅಲಗೂರಿಗೆ
2	ಅಗರಲಿಂಗನಹಳ್ಳಿ	ತಿಪ್ಪೂರಿಂದ	ಮದ್ದೂರಿಗೆ

ನಂ. 53.—ಇದರಡಿ ಕಂಡ, ಮೈಸೂರು ಡಿಸ್ಟ್ರಿಕ್ಟು ಮಂಡ್ಯ ತಾಲ್ಲೂಕಿನ ಗ್ರಾಮಗಳ ಬೇರುವಿಕೆಯು ಹುಕುಂ ಮಾಡಲ್ಪಟ್ಟಿರುತ್ತೆ:—

ಮಾಗಣಿ.	ನಂಬರ್.	ಬಿಳಿಕೊಳ್ಳಲ್ಪಡಬೇಕಾದ ಗ್ರಾಮಗಳು.	ನಂ.	ಮೂರನೇ ಕಲಮಿನಲ್ಲಿ ಕಂಡ ಗ್ರಾಮಗಳೊಂದಿಗೆ ಕೂಡಿಸಲ್ಪಡಬೇಕಾದ ಗ್ರಾಮಗಳು.
1	2	3	4	5
ದುದ್ದ	1	ಗಂಟಿಗವಾಡನಹಳ್ಳಿ	.. 1	ಚಿಕ್ಕಗವಡನಹಳ್ಳಿ
ಮತ್ತಿಕೆರೆ	2	ಜಾವನಹಳ್ಳಿ	.. 1	ಮರಗವಡನಕೊಪ್ಪಲು
ಬಸರಾಳ	3	ತಿರುಮಲಾಪುರ	.. 1	ಕುರುಬರಹಳ್ಳಿ
	4	ಗುತ್ತಿಗನಹಳ್ಳಿ	.. 1	ಸುಂಡಲಗೆರೆ
ಮದ್ದೂರು	5	ಗೊರವನಹಳ್ಳಿ	.. 1	ತಿಪ್ಪಸಂದ್ರ
	6	ಚಾವುನಹಳ್ಳಿ	.. 1	ಉಪ್ಪಾರದೊಡ್ಡಿ
ತಿಪ್ಪೂರು.	7	ದಡಿಗ	.. 1	ಹೊಸೂರು
	8	ಹೊಸ್ಕೆಲಗೆರೆ	.. 1	ಚಂದಹಳ್ಳಿ

ತಾರೀಖು 9ನೇ ಮೇ 1889.

ನಂ. 31.—ಶ್ರೀಮ೯ಮಹಾರಾಜಾ ಸರ್ಕಾರದವರು 1885ನೇ ಇಸವಿ IIIನೇ ನಂಬರ್ ರೆಗ್ಯುಲೇಷನ್ನಿಂದ ಮೈಸೂರು ದೇಶಕ್ಕೆ ಜಾರಿಗೆ ತರಲ್ಪಟ್ಟ 1881ನೇ ಇಸವಿ XXIIನೇ ನಂಬರ್ ಯಿಕ್ಸೈಸ್ ಆಕ್ಟಿನ 55ನೇ ಸೆಕ್ಷನಿನಿಂದ ಅವರಿಗೆ ಉಂಟುಮಾಡಲ್ಪಟ್ಟ ಅಧಿಕಾರಗಳ ದೆಸೆಯಿಂದ "ಪರಾಯಿದೇಶದ ಸಾರಾಯಿ" ಮತ್ತು "ಪರಾಯಿದೇಶದ ಉಕ್ಕಿದ ಸಾರಾಯಿ" ಯ (ಚಿಲ್ಲರೆ ಯಾ ಒಟ್ಟು) ಮಾರಾಟದ ಬಗ್ಗೆ ಕೊಡಲ್ಪಡುವ ಲೈಸೆನ್ಸುಗಳಿಗೆ ಸಂಬಂಧಪಟ್ಟ ಇದರಡಿಕಂಡ ರೂಲ್ಸುಗಳನ್ನೇ ನಿಬಂಧನೆಗಳನ್ನು ಉಂಟು ಮಾಡುತ್ತಾರೆ.—

ರೂಲ್ 1.—3ನೇ ಸೆಕ್ಷನ್ ಅನುಸರಿಸಿ ಮತ್ತು ಸದರಿ ಆಕ್ಟಿನ ಕೆಲಸಗಳಿಗೋಸ್ಕರ, ಶ್ರೀಮ೯ ಮಹಾರಾಜಾ ಸರ್ಕಾರದವರು ನಿಯಮಿಸುವದೇನಂದರೆ:—

ಅರ್ಥ ವಿವರಣೆ.

(a) "ಪರಾಯಿದೇಶದ ಸಾರಾಯಿ" ಮತ್ತು "ಪರಾಯಿದೇಶದ ಉಕ್ಕಿದಸಾರಾಯಿ" ಅಂದರೆ ಯೂರೋಪ್, ಅಮೆರಿಕಾ ಯಾ ಆಸ್ಟ್ರೇಲಿಯಾದಲ್ಲಿನ ಯಾವ ಸ್ಥಳದಲ್ಲಾಗಲೀ ತಯಾರ್ ಮಾಡಲ್ಪಟ್ಟು, ಶ್ರೀಮ೯ ಮಹಾರಾಜಾ ಸರ್ಕಾರದವರಿಂದ ಮಂಜೂರ್ಮಾಡಲ್ಪಟ್ಟಂಥಾ ಗೊತ್ತಾದ ಗುಣಉಳ್ಳದ್ದಾಗಿ ಮೈಸೂರು ದೇಶಕ್ಕೆ ಆಮದ್ ಮಾಡಲ್ಪಟ್ಟ ಅಂಥಾ "ಸಾರಾಯಿ" ಯಾ "ಉಕ್ಕಿದ ಸಾರಾಯಿ" ಯಂದು ಅರ್ಥವಾಗತಕ್ಕದ್ದು.

(b) (ಜಾವಾ, ಸಿಲೋನ್, ಜೆಮೇಕಾ ಮತ್ತು ಇಂಡಿಯಾ ದೇಶದಲ್ಲಿನ ಯಾವ ಸ್ಥಳದಲ್ಲೇಯಾಗಲಿ ತಯಾರ್ಮಾಡಲ್ಪಟ್ಟ) ತಮ್ಮಾಂ ಇತರ ಸಾರಾಯಿ ಮತ್ತು ಉಕ್ಕಿದ ಸಾರಾಯಿಯು "ಕಂತ್ರಿ ಸಾರಾಯಿ" ಯಾ "ಕಂತ್ರಿ ಉಕ್ಕಿದ ಸಾರಾಯಿ" ಯಂಬಿದಾಗಿ ಸಂದರ್ಭಾನುಸಾರ ಎಣಿಸಲ್ಪಡತಕ್ಕದ್ದು.

ರೂಲ್ II.—(a) ಪರಾಯಿ ದೇಶದ ಸಾರಾಯಿ ಮತ್ತು ಪರಾಯಿ ದೇಶದ ಉಕ್ಕಿದ ಸಾರಾಯಿ ಯಿವುಗಳ ಮೇಲೆ ಶ್ರೀಮ೯ ಮಹಾರಾಜರವರ ಸರ್ಕಾರಕ್ಕೆ ಯಾವ ಅಬ್ಕಾರೀ ತೀರ್ವೆಯೂ ತೆರಬೇಕಾದ್ದಿಲ್ಲವು; ಮತ್ತು—

ತೀರ್ವೆ.

(b) ತಮ್ಮಾಂ ಕಂತ್ರಿ ಸಾರಾಯಿ ಮತ್ತು ಕಂತ್ರಿ ಉಕ್ಕಿದ ಸಾರಾಯಿ ಯಿವುಗಳಮೇಲೆ ಸದರೀ ಸರ್ಕಾರಕ್ಕೆ ಅಬ್ಕಾರೀ ತೀರ್ವೆಯು ವಾವತಿ ಮಾಡಲ್ಪಡಬೇಕು, ಮತ್ತು ಅಂಥಾ ಕಂತ್ರಿ ಸಾರಾಯಿ ಯಾ ಕಂತ್ರಿ ಉಕ್ಕಿದ ಸಾರಾಯಿಯು ಅಂಥಾ ಅಬ್ಕಾರೀ ತೀರ್ವೆ ವಾವತಿ ಮಾಡಲ್ಪಡದೆಯೇ ಮೈಸೂರು ದೇಶಕ್ಕೆ ಆಮದ್ ಮಾಡಲ್ಪಡಕೂಡದು.

ಲೈಸೆನ್ಸುಗಳು ಯಾರಿಂದ ಮತ್ತು ಯಷ್ಟು ಕಾಲಕ್ಕೆ ಕೊಡಲ್ಪಡತಕ್ಕದ್ದು.

ರೂಲ್ III.—ಪರಾಯಿದೇಶದ ಸಾರಾಯಿ ಅಥವಾ ಪರಾಯಿದೇಶದ ಉಕ್ಕಿದಸಾರಾಯಿ ಯಾ ಈ ಯರಡರ ಬಿಕರಿಬಗ್ಯಾಗಿ ಲೈಸೆನ್ಸುಗಳು ಆಯಾ ಡಿಸ್ಟ್ರಿಕ್ಟಿನ ಡಿಪ್ಯುಟಿ ಕಮ್ಮಿಷನರಿಂದ ಕೊಡಲ್ಪಡತಕ್ಕದ್ದು; ಮತ್ತು ಅಂಥಾ ಪ್ರತಿ ಲೈಸೆನ್ಸೂ ಆದು ಕೊಡಲ್ಪಟ್ಟ ಸರ್ಕಾರ ಸಾಲಿನ ಮಾರ್ಚಿ 31ನೇ ತಾರೀಖಿನ ವರಿಗೆ ವಾಯಿದೆ ಉಂಟಾಗಿ ಬೆರತಕ್ಕದ್ದು.

ಒಟ್ಟು, ಚಿಲ್ಲರೆ ಪಗ್ಯೆರೆ ಮಾರಾಟದ ಲೈಸೆನ್ಸು.

ರೂಲ್ IV.—IIIನೇ ರೂಲ್ ಅನುಸರಿಸಿ ಒಟ್ಟು ಬಿಕರೀ ಬಗ್ಯೂ, ಚಿಲ್ಲರೆ ಬಿಕರೀ ಬಗ್ಯೂ, ಹೊಟೇಲ್‌ಗಳಲ್ಲಿ ಬಿಕರೀ ಬಗ್ಯೂ ಮತ್ತು ರಿಫ್ರೆಷ್‌ಮೆಂಟ್ ರೂಂ ದುಕಾನ್‌ಗಳಲ್ಲಿ ಬಿಕರಿಬಗ್ಯೂ ಕೊಡಲ್ಪಡುವ ಲೈಸೆನ್ಸುಗಳು ಬೇರೆಬೇರೆಯಾಗಿ ಯಿರತಕ್ಕದ್ದು; ಆದರೆ ವಬ್ಬ ಮನುಷ್ಯನು ಯರಡು ಪಿಚ್ಚು ಲೈಸೆನ್ಸುಗಳನ್ನು ಉಂಟಾಗಿರಬಹುದು.

ಲೈಸೆನ್ಸಿನ ದರಗಳು.

ರೂಲ್ V.—IIIನೇ ರೂಲ್ ಅನುಸರಿಸಿ ಕೊಡಲ್ಪಡುವ ಪ್ರತಿ ಲೈಸೆನ್ಸಿಗೂ ಇದರಡಿಕಂಡ ದರದಂತೆ ಲೈಸೆನ್ಸ್ ಫೀ ವಸೂಲ್ ಮಾಡಲ್ಪಡತಕ್ಕದ್ದು:—

	ರೂ.	
ಒಟ್ಟು ಮಾರಾಟದ ಲೈಸೆನ್ಸಿಗೆ	25	31ನೇ ಮಾರ್ಚಿಗೆ ಆಬೈರಾಗುವ ಸಾಲ್ ಯಾ ಅದರ ಕೆಲವು ಕಾಲಕ್ಕೆ.
ಚಿಲ್ಲರೆ—ಡಿಟೋ ಡಿಟೋ	50	
ಹೊಟೇಲ್ ಲೈಸೆನ್ಸಿಗೆ	25	
ರಿಫ್ರೆಷ್‌ಮೆಂಟ್ ರೂಮ್ ದುಕಾನಿನ ಲೈಸೆನ್ಸಿಗೆ	25	

(ಷರಾ.—ಬೆಂಗಳೂರು ಮತ್ತು ಮೈಸೂರು ಷಹರ್‌ಗಳಲ್ಲಿ ಚಿಲ್ಲರೆ ಮಾರಾಟದ ಬಗ್ಯೆ ಮತ್ತು ಹೊಟೇಲ್ ಯಾ ರಿಫ್ರೆಷ್‌ಮೆಂಟ್‌ರೂಂ ದುಕಾನಿಗೋಸ್ಕರ ಲೈಸೆನ್ಸ್ ಪಡೆದಿರುವ ಪ್ರತಿ ಮನುಷ್ಯನೂ ಮೇಲ್ಕಂಡ ಲೈಸೆನ್ಸ್ ಫೀ ಮೊಬಲಗು ಪಾವತಿ ಮಾಡುವದು ಶಿವಾಯಿ ಮ್ಯುನಿಸಿಪಲ್ ರೆಗ್ಯುಲೇಷನಿನ 58ನೇ ಸೆಕ್ಷರ್ಷ ಅನುಸರಿಸಿ ತಾನು ವಹಿವಾಟು ನಡಿಸುವ ಸ್ಥಳವನ್ನು ರೆಜಿಸ್ಟ್ರಿ ಮಾಡಿಸಲಿಕ್ಕೂ ಅಂಥಾ ರೆಜಿಸ್ಟ್ರೇಷ್ ಸರ್ಟಿಫಿಕೇಟ್ ಪಡೆಯುವ ಬಗ್ಯೆ ಸದರಿ ರೆಗ್ಯುಲೇಷನಿನ C IIನೇ ಗುರ್ತಿನ ಷೆಡ್ಯೂಲಿನ IIನೇ ಕ್ಲಾಸ್, IIIನೇ ಕ್ಲಾಸ್ ಅಥವಾ IVನೇ ಕ್ಲಾಸ್ ಅನುಸರಿಸಿ ಸಾಲಿಯಾನಾ ಎಂದು ಫೀಜ್ ಮೊಬಲಗನ್ನು ಮ್ಯುನಿಸಿಪಾಲಿಟಿಗೆ ಪಾವತಿ ಮಾಡಲಿಕ್ಕೂ ಬದ್ಧನಾಗಿರುತ್ತಾನೆ.)

ರೂಲ್ VI.—IIIನೇ ರೂಲ್ ಅನುಸರಿಸಿ ಕೊಡಲ್ಪಟ್ಟ ಲೈಸೆನ್ಸಿನ ಬೆಲೆಯಿಂದ, ಮೈಸೂರು ಗವರ್ಮೆಂಟ್ ಸೆಂಟ್ರಲ್ ಡಿಸ್ಟಿಲ್ಲೇರಿಯಲ್ಲಿ ತಯಾರ್ಮಾಡಲ್ಪಟ್ಟ ಪ್ರೂಫಿಗೆ ಸಮಾನವಾದ ಮತ್ತು ಪ್ರೂಫಿಗೆ ಮೇಲ್ಪಟ್ಟ "ಡಬಲ್ ಡಿಸ್ಟಿಲ್ಡ್" ಯಾನೇ ಯಿಮ್ಮಡಿ ಭಟ್ಟಿ ಯಿಳಿಸಿದ ಸಾರಾಯಿಯನ್ನಾಗಲೀ ಅಥವಾ ಒಜಿಂಬಡಿಕೆ ಪ್ರಕಾರ ಆವುಡ್ ಮಾಡಲ್ಪಟ್ಟ್ಯು 1861ನೇ ಇಸವಿ XXIIನೇ ಆಕ್ಟಿನ 7ನೇ ಸೆಕ್ಷರ್ಷ ಅನುಸರಿಸಿ ತೆರಬೇಕಾದ ತೀರ್ವೆ ದರವನ್ನು ಪೂರ್ತಿಯಾಗಿ ಪಾವತಿ ಮಾಡಲ್ಪಟ್ಟ ಯಿಮ್ಮಡಿ ಭಟ್ಟಿ ಯಿಳಿಸಿದ ಕಂಟ್ರಿ ಸ್ಪಿರಿಟ್ ಸಾರಾಯಿಯನ್ನಾಗಲಿ ಯಾ ಸದರೀ ಡಿಸ್ಟಿಲೇರಿಯಿಂದ ಮೊಹರ್‌ನಿಶಿ ಇದರಡಿಕಂಡ ಗುರ್ತಿನ ಛಾಪೆ ಲೇಬಿಲ್‌ನಿಶಿ ಪದಗಿಸಲ್ಪಟ್ಟಿರುವ ಅಂಥಾ ಸಾರಾಯಿ ಯಾ ಕಂಟ್ರಿ ಸ್ಪಿರಿಟ್ ಸಾರಾಯಿಯ ಯಾವ ತಯಾರಿಯನ್ನಾಗಲೀ ಬಿಕರೀ ಮಾಡುವದಕ್ಕೆ ಅಧಿಕಾರ ಉಂಟಾಗಿರತಕ್ಕದ್ದು.

ಡಬಲ್ ಡಿಸ್ಟಿಲ್ಯಾನೇ ಯಿಮ್ಮಡಿ ಭಟ್ಟಿ ಯಿಳಿಸಿದ ಸ್ಪಿರಿಟ್ ಸಾರಾಯಿ ಮತ್ತು ಆ ಸಂಬಂಧವಾದ ತಯಾರಿಯನ್ನು ಕುರಿತು.

ರೂಲ್ VII.—ಈ ರೂಲ್ಸ್ ಅನುಸರಿಸಿ ರಿಫ್ರೆಷ್‌ಮೆಂಟ್ ರೂಮಿಗೆ ಲೈಸೆನ್ಸುಗಳು, ಬೆಂಗಳೂರು ವ ಮೈಸೂರು ಷಹರ್‌ಗಳಲ್ಲಿ ಮಾಹೆಯಾನಾ 25 ರೂಪಾಯಿಗಳಿಗೆ ಕಮ್ಮಿಯಿಲ್ಲದೆಯೂ ಅನ್ಯತ್ರ 10 ರೂಪಾಯಿಗಳಿಗೆ ಕಮ್ಮಿ ಯಿಲ್ಲದೆಯೂ ಕೊಡಲ್ಪಡತಕ್ಕದ್ದು.

ರೂಲ್ VIII.—ಯಾವ ಯಕ್ಸೈಸ್ ಆಫಿಸರಾದರೂ, ಈ ರೂಲ್ಸ್ ಅನುಸರಿಸಿ ಪಟ್ಟು ಬಿಕರೀದಾರನು ಪರಾಯಿದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿದೇಶದ ಉಕ್ಕಿದ ಸಾರಾಯಿಯನ್ನು ಬಿಕರಿಮಾಡತಕ್ಕಂಥಾ ಯಾವದಾದರೂ ದುಕಾ ಯಾ ಆವರಣವನ್ನು ಹಗಲಿನಲ್ಲಾಗಲೀ ಯಾ ರಾತ್ರಿಯಲ್ಲಾಗಲೀ ಯಾವ ಕಾಲದಲ್ಯಾದರೂ ಪ್ರವೇಶ ತನಿಖೆ ಮಾಡಬಹುದು.

ರೂಲ್ IX.—IIIನೇ ರೂಲ್ ಅನುಸರಿಸಿ ಕೊಡಲ್ಪಟ್ಟ ಲೈಸೆನ್ಸುಗಳು ಯಿವಕ್ಕೆ ಲಗ್ಗತ್ತಿರುವ ನಮೂನೆಯಲ್ಲಿರತಕ್ಕವು.

"ಪರಾಯಿ ದೇಶದ ಸಾರಾಯಿ" ಮತ್ತು "ಪರಾಯಿ ದೇಶದ ಉಕ್ಕಿದ ಸಾರಾಯಿ" ಇವುಗಳನ್ನು ಒಟ್ಟಾಗಿ ಮಾರುವ ಬಗ್ಯೆ ಲೈಸೆನ್ಸ್.

ಡಿಸ್ಟ್ರಿಕ್ಟಿನ

ಡೆಪ್ಯುಟಿ ಕಮ್ಮಿಷನರಾದ

ಯೆಂಬ

ನಾನು, —— ಸ್ಥಳದಲ್ಲಿ ವಾಸವಾಗಿರುವ ಮಗ

ಮಾಡಬಹುದು. ಅಂಥಾ ಬಿಕರಿ ಯಾ ವರ್ಗವು ಯಕ್ಸೈಸ್ ಇಲಾಖೆಯಲ್ಲಿ ಡಿಪ್ಯೂಟಿ ಕಮ್ಮಿಷನರವರಿಂದ ಅವರ ಸ್ಯೆ ಮೊಹರಿನಿಂ ಬರ ಹ ಮೂಲಕವಾದ ಹುಕುಂಯಾನೆ ಪ್ಯಾಸ್ ಚೀಟಿಯನ್ನ ದ್ವಿಪ್ರತಿಯಾಗಿ ಮುಂಚಿತವಾಗಿ ಪಡೆದ ಹೊರತು ಮಾರಲ್ಪಡಕೂಡದು. ಡ್ಯುಪ್ಲಿ ಕೇಟ್ ಪ್ಯಾಸ್ ಚೀಟಿಯು, ಅಂಥಾ ಬಿಕರೀ ಯಾ ವರ್ಗಕ್ಕೂ ೀಸ್ತರ ಹಾಂಗೆ ಬಿಕರಿ ಯಾ ವರ್ಗದ ಮೂಲಕ ಪಡೆದ ಲೈಸೆನ್ಸುದಾರನಲ್ಲಿ ಪೌಜರ್ ತರೀಕ ಉಳಿಸಿಕೊಳ್ಳಲ್ಪಟ್ಟು ಯಕ್ಸೈಸ್ ಇಲಾಖೆಯ ಯಾವ ಆಫಿಸರೇ ಆಗಲಿ ಅಪೇಕ್ಷಿಸಿದಾಗ ಹಾಜರ್ಮಾಡಲ್ಪಡತಕ್ಕದ್ದು, ಮತ್ತು ಒರಿಜನಲ್ ಪ್ಯಾಸ್ ಚೀಟಿಯು ಖರೀದಿದಾರ ವ ಬಿಕರೀದಾರರಿಂದ ತಾರೀಖ್ ನಮೂದಿಸಿ ರುಜು ಮಾಡಲ್ಪಟ್ಟು ಯಕ್ಸೈಸ್ ಇಲಾಖೆಯಲ್ಲಿ ಡಿಪ್ಯೂಟಿ ಕಮ್ಮಿಷನರವರಿಗೆ ವಾಪಸ್ ಮಾಡಲ್ಪಡತಕ್ಕದ್ದು.

VIII. ಈ ಲೈಸೆನ್ಸುದಾರನು, ರೋಜೇನಾ ತಿಂಗಳು ವ ತಾರೀಖು ನಮೂದಿನಿಂದ ತಾನು ಪಡೆದ ಪರಾಯಿದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಯ ತ್ತೇದ್ದಾದು ವ ತಪಶೀಲನ್ನೂ ಅವು ಸರಬರಾಯಿ ಮಾಡಲ್ಪಟ್ಟ ಮಾರ್ಗವನ್ನೂ ಬಿಕರೀ ಮಾಡಲ್ಪಟ್ಟ ತೇದಾದು ಮತ್ತು ಕಿಮ್ಮತನ್ನೂ, ಬಿಕರಿಗೆ ಪಡೆದ ಮನುಷ್ಯ ಫಲಾನೆಯವನೆಂಬದನ್ನೂ ಮತ್ತು ಹಾಜರಿಯಲ್ಲಿ ಕಿಲ್ಕ್ ಯಿತಕ್ಕ ತೇದಾದನ್ನೂ ಸುದಾ ಸಾಚಾ ವ ಕರಾರ್‌ವಾಕಾ ಆಗಿ ಲೆಖ್ತ ಬರೆದಿಡತಕ್ಕದ್ದು. ಅಂಥಾ ಲೆಖ್ತನ್ನು ಯಕ್ಸೈಸ್ ಇಲಾಖೇ ಆಫಿಸರರಿಂದ ಯಾವಾಗಲಾಗಲಿ ತನಿಖಿ ನೋಡಲ್ಪಡತಕ್ಕ ಬಗ್ಯೆ ಹಾಜರಿರತಕ್ಕದ್ದು. ಈ ಬಾಬತು ಲೆಖ್ತದ ಗೋಪ್ಯಾರೆಯು, ಅದನ್ನು ಬರವಾಡಿಕೊಳ್ಳುವದಕ್ಕೆ ನಿಯಮಿಸಲ್ಪಟ್ಟ ಅಬ್‌ಕಾರೀ ಆಫಿಸರರಿಗೆ ದ್ವಿಪ್ರತಿಯಾಗಿ ತಯಾರ್ಮಾಡಲ್ಪಟ್ಟು ಮಾಹೆಯಾನಾ ಕಳುಹಿಸಲ್ಪಡತಕ್ಕದ್ದು, ಅವರು ತನಿಖೆಯಿಂದ ಡಿಪ್ಯೂಟಿ ಕಮ್ಮಿಷನರವರ ಯಕ್ಸೈಸ್ ಇಲಾಖೆಗೆ ರವಾನಿಸತಕ್ಕದ್ದು.

IX. ಈ ಲೈಸೆನ್ಸು ಕ್ರಯ, ದಾನ, ಆಧಾರ ಮೂಲಕವಾಗಲೀ ಯಾ ಅನ್ಯಥಾ ಆಗಲೀ ಪರಭಾರೆ ಮಾಡಲ್ಪಡಕೂಡದು. ಮತ್ತು ಅದರಲ್ಲಿ ನಮೂದಾದ ಮನುಷ್ಯನು ವಿನಾ, ಇತರ ಯಾರಿಗೂ ಅದರಲ್ಲಿ ಕಂಡಂತೆ ನಡಿಯುವದಕ್ಕೆ ಅಧಿಕಾರ ವಿರುವದಿಲ್ಲ.

X. ಈ ಲೈಸೆನ್ಸುದಾರನು, ದುಕಾನಿನಲ್ಲಿ ತನಿಗೋಸ್ಕರ ಕೆಲಸ ನಡಿಸುವ ಬಗ್ಯಾಗಿ ಒಬ್ಬ ದುರ್ಕಾದಾರ ಯಾ ಬಿಕರೀದಾರನನ್ನು ನೇಮಿಸಬಹುದು, ಪರಂತು ಅಂಥಾ ಮನುಷ್ಯ ಯಾ ಮನುಷ್ಯನ ಹೆಸರು ಮುಂಚಿತವಾಗಿ ಡಿಪ್ಯೂಟಿ ಕಮ್ಮಿಷ್ನರವರ ಆಫಿಸಿನಲ್ಲಿ ರೆಜಿಸ್ಟರು ಮಾಡಲ್ಪಟ್ಟು ಅಂಥಾ ದುರ್ಕಾದಾರ ಯಾ ಬಿಕರೀದಾರನ ಹೆಸರು ಈ ಲೈಸೆನ್ಸಿನ ಮೇಲ್‌ಭಾಗದಲ್ಲಿ ನಮೂದ್ ಮಾಡಲ್ಪಡಬೇಕು.

XI. ಮೇಲ್ಕಂಡ ಯಾವದೊಂದು ಷರತ್ತುಗಳಾದರೂ ಉಲ್ಲಂಘಿಸಲ್ಪಟ್ಟರೆ ಲೈಸೆನ್ಸುದಾರನು, ಯಕ್ಸೈಸ್ ಕಾನೂನಿನಿಂದಲೂ ಮತ್ತು ಅದಕ್ಕೆ ಸಂಬಂಧಪಟ್ಟ ರೂಲ್ಸುಗಳಿಂದಲೂ ಆ ಬಗ್ಯಾಗಿ ವಿಧಿಸಲ್ಪಟ್ಟರುವ ತಮಾಂ ದಂಡನೆಗಳಿಗೆ ಗುರಿಯಾಗತಕ್ಕದ್ದಲ್ಲದೆ (1885ನೇ ಇಸವಿ IIIನೇ ನಂಬರ್ ಮೈಸೂರು ರೆಗ್ಯುಲೇಷನ್ ಆದ) 1881ನೇ ಇಸವಿ XXIIನೇ ನಂಬರ್ ಆಕ್ಟಿನ 13ನೇ ಸೆಕ್ಷನ್ ಅನುಸರಿಸಿ ಡಿಪ್ಯೂಟಿ ಕಮ್ಮಿಷ್ನರವರಿಂದ ಅವರ ಯುಕ್ತಾನುಸಾರ ಸದರೀ ಲೈಸೆನ್ಸು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

XII. ಈ ಲೈಸೆನ್ಸು 18 ನೇ ಇಸವಿ ಮಾರ್ಚಿ 31ನೇ ತಾರೀಖುವರಿಗೆ ಜಾರಿಯಲ್ಲಿರತಕ್ಕದ್ದು.

ಡಿಸ್ಟ್ರಿಕ್ಟು

ಡಿಪ್ಯೂಟಿ ಕಮ್ಮಿಷನರ ಆಫಿಸು

ತಾರೀಖು

ಡಿಪ್ಯೂಟಿ ಕಮ್ಮಿಷನರ
ಡಿಸ್ಟ್ರಿಕ್ಟು.

ಸ್ಥಳದ,

ವಾಸಸ್ಥನಾದ ಮತ್ತು

ನಮಗನಾದ ಇದರಿಂ ರುಜು ಮಾಡಿರುವ ಹೆಸರುಳ್ಳ

ಮೇಲ್ಕಂಡ ಲೈಸೆನ್ಸುದಾರನಾದ ನಾನು, ನನಿಗೋಸ್ಕರವೂ ನನ್ನ ವಾರಸುದಾರರು, ನ್ಯಾಯವಾದ ಪ್ರತಿನಿಧಿಗಳು ಮತ್ತು ನನ್ನಿಂದ ವರ್ಗ ಪಡೆದವರು ಇವರುಗಳಿಗೋಸ್ಕರವೂ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸಲ್ಪಟ್ಟ ತಮಾಂ ಷರತ್ತು ವ ಬಂಧನಬಿಡಿಕೆಗಳನ್ನ ಯಿದರಿಂದ ಬಿಟ್ಟು

ನೇ ತಾರೀಖಿನಲ್ಲಿ

ನಮ್ಮಿಗಳ ರೂಬರೂ ಆಫಿಸಿನಲ್ಲಿ

ರುಜೂ ಮೊಹರ್ ಮಾಡಿ ಕೊಡಲ್ಪಟ್ಟಿರುತ್ತೆ.

ಸಾಕ್ಷಿಗಳು { 1. _____ 2. _____ 3. _____ } ಲೈಸೆನ್ಸುದಾರ { _____ _____ _____ }

ಯಾರ ಮುಂಬೆ ರುಜೂ ಮಾಡಲ್ಪಟ್ಟಿತೋ
ಅಂಥಾ ಆಫಿಸರರ ರುಜು.

"ಪರಾಯಿ ದೇಶದ ಸ್ಪಿರಿಟ್ ಸಾರಾಯಿ" ವ "ಪರಾಯಿ ದೇಶದ ಉಕ್ಕಿದ ಸಾರಾಯಿ" ಯನ್ನ ಚಿಲ್ಲರೆಯಾಗಿ ಮಾರುವ ಬಗ್ಗೆ ಲೈಸೆನ್ಸ.

ರಾದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನ ಯಂಬ ಹೆಸರುಳ್ಳ ನಾನು

ಲ್ಲಿ ವಾಸವಾಗಿರುವ

ನ ಮಗನಾದ ಯಂಬವನಿಗೆ

ಇದರಡಿ ಕಂಡ ಷರತ್ತುಗಳಿಗೂ ಮತ್ತು ಸೂಚನಾ ರೂಪಾಯಿಗಳ ಲೈಸೆನ್ಸ್ ಫೀ ತೆರಲಿಕ್ಕೂ ಬದ್ಧನಾಗಿ

ಲ್ಲಿರುವ ನೇ ನಂಬರುಳ್ಳ ದುಕಾನಿನಲ್ಲಿ ಪರಾ

ಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನ ಚಿಲ್ಲರೆಯಾಗಿ ಮಾರಲಿಕ್ಕೆ ಇದರಿಂದ ಅಧಿಕಾರ ಕೊಟ್ಟಿರುತ್ತೆನೆ.

ಷರತ್ತುಗಳು.

I. ಈ ಲೈಸೆನ್ಸುದಾರನು, ತತ್ಕಾಲಜಾರೀಲಿರುವ ಎಕ್ಸೈಜ್ ಕಾನೂನಿಗೂ, ಮತ್ತು (1885ನೇ ಇಸವಿಯ ಮೈಸೂರ IIIನೇ ರೆಗ್ಯೂಲೇಷನ್) 1881ನೇ ಇಸವಿಯ XXIIನೇ ಯಕ್ಸೈಜ್ ಆಕ್ಟಿನ 55ನೇ ಕಲಮ್ ಅನುಸರಿಸಿ ಶ್ರೀಮಹಾರಾಜಾ ಸರ್ಕಾರದವರಿಂದ ವಿಸರ್ಜಿಸೋಣಾದ ಯಲ್ಲ ನಿಬಂಧನೆಗಳ ವೇರಿಗೆ ನಡೆದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

II. (a) ಇದಕ್ಕೆ ಲಗ್ನತಾಯಿರುವ ಪಟ್ಟಿಯಲ್ಲಿ ವಿವರಿಸೋಣಾದ ಗುಣಗಳುಳ್ಳ (ಪರಾಯಿ ದೇಶದ ಸ್ಪಿರಿಟ್ ಸಾರಾಯಿ, ಯಾ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಯನ್ನಾಗಲಿ, ಅಥವಾ ಸಂಗತ್ಯಾನುಸಾರ ಪರಾಯಿ ದೇಶದ ಉಕ್ಕಿದ ಸಾರಾಯಿ) ಯನ್ನಾಗಲಿ ಮಾರಲಿಕ್ಕೆ ಈ ಲೈಸೆನ್ಸು ಕೊಡಲ್ಪಟ್ಟಿರುತ್ತೆ, ಡೆಪ್ಯುಟಿ ಕಮ್ಮಿಷನರು ತಾವಾಗಿಯೇ ಆಗಲಿ ಅಥವಾ ಲೈಸೆನ್ಸುದಾರನು ಅರ್ಜೀ ಕೊಟ್ಟ ಮೇಲಾಗಲಿ, ಅಂಥಾ ಪಟ್ಟಿಗೆ ಹೊಸದಾಗಿ ಕೇರಿಸುವದಕ್ಕೂ ಅಥವಾ ಬದಲಾಯಿಸುವದಕ್ಕೂ ಸ್ವತಂತ್ರವುಳ್ಳವರಾಗಿ ಧಾರೆ. ಪಟ್ಟಿಯೊಳಗಣ ಪ್ರತಿ ಬದಲಾವಣೆಗೂ ಡೆಪ್ಯುಟಿ ಕಮ್ಮಿಷನರವರು ರುಜೂ ಮಾಡತಕ್ಕದ್ದು.

(b) ಸದರೀ ಪಟ್ಟಿಯಲ್ಲಿ ಬದಲಾವಣಿಯೊಂದಿಗೆ ಯಿರುವ ಗುರ್ತುಗಳ ಪೈಕಿ ಯಾವದಾದರೊಂದು ಗುರ್ತ್ತುಯಿಲ್ಲದ ಯಾವ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನಾಗಲಿ ಈ ಲೈಸೆನಿನ ದೆಸೆಯಿಂದ ಮಾರಲ್ಪಡತಕ್ಕದ್ದಲ್ಲವು.

(ಯಾವ ಗುರ್ತುಳ್ಳ ಸಾರಾಯಿಯ ಬಿಕರೀಬಗ್ಗೆ ಈ ಲೈಸೆನ್ಸ್ ಕೊಡಲ್ಪಡುತ್ತೋ ಆ ಜಾಬಿತು ಪಟ್ಟಿಯನ್ನು ಯಿಲ್ಲಿ ದಾಖಲ್ಮಾಡತಕ್ಕದ್ದು).

III. ಪರಾಯಿ ದೇಶದ ಸ್ಪಿರಿಟ್ ಯಾ ಉಕ್ಕಿದ ಸಾರಾಯಿಯನ್ನು ಯೊಂದು ದಫೆಗೆ ಯೊಂದು ಕ್ವಾರ್ಟ್ ಶೀಷೆ ಅಥವಾ ಯೊಂದು ಪೈಂಟ್ ಶೀಷೆಗಿಂತಲೂ ಕಮ್ಮಿಯಾದ ತೇದಾದನ್ನು ದುಕಾನಿನಿಂದ ಮಾರತಕ್ಕದ್ದಲ್ಲವು.

IV. (1) ಯಾವ ಬಗೆಯಾದ ಪರಾಯಿದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನು ಯಪ್ಪುಮಟ್ಟಿಗಾಗಲೀ ಕಮರ್ಷಿಂಗ್ ಆಫಿಸರರ ಯಾ ಆ ಬಗ್ಯೆ ಅಂಥಾ ಆಫಿಸರಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವನಾದರೊಬ್ಬ ಮನುಷ್ಯನ ಬಿರಹ ಮೂಲಕವಾದ ಅಪ್ಪಣೆ ಶಿವಾಯಿ ಯಾವ ಯೂರೋಪಿಯರ್ ನ್ಯಾಕಮ್ಮಿಷನ್ಡ್ ಆಫಿಸರ್ ಯಾ ಪ್ರೈವೇಟ್ ಸೋಲ್ಜರಿಗಾಗಲಿ ಯಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾ ಕೀರಿದ ಯಾವ ಯೂರೋಪಿಯರ್ ಯಾ ಈಸ್ಟ್ಯಿಂಡಿಯರ್ ಹೆಂಗಸರಿಗಾಗಲಿ ಮಾರಲೂಕೂಡದು, ಕೊಡಲೂಕೂಡದು. ಮತ್ತು ಆಂಥಾ ಬಿರಹ ಮೂಲಕವಾದ ಅಪ್ಪಣೆಯನ್ನ ಲೈಸೆನ್ಸದಾರನು ಹಾಗೆ ಮಾರಾಟ ಮಾಡಿದ್ದಕ್ಕಾಗಿ ದಸ್ತ್ರೈವಜ್ ತೀರಿಕು ತನ್ನ ಬಳಿ ಯಿಟ್ಟುಕೊಂಡಿದ್ದು ಯಾವ ಯಕ್ಸೈಜ್ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು.

(2) ಮೇಲೆ ಹೇಳೋಣಾದ ದುಕಾನಿನಲ್ಲಿ ನಡಿಯುವ ಮಾರಾಟವು ಲೈಸೆನ್ಸದಾರನಿಗೆ ಅಥವಾ ಬಿಕ್ರೀದಾರನಿಗೆ ಜನ್ನಾಗಿ ಗುರ್ತುಳ್ಳ ಗೌರತೆವುಳ್ಳ ಮನುಷ್ಯರುಗಳಿಗೆ ಮಾತ್ರ ನಡಿಯತಕ್ಕದ್ದು.

V. ದುಕಾನಿನ ಆವರಣದೊಳಗೇನೇ ಕುಡಿಯಲ್ಪಡುವ ಬಗ್ಯೆ ಸಾರಾಯಿಯನ್ನು ಮಾರಲಿಕ್ಕೆ ಈ ಲೈಸೆನಿನಿಂದ ಅಪ್ಪಣೆ ಉಂಟಾಗಿರುವದಿಲ್ಲ.

VI. ಸದರೀ ಅಂಗಡಿಯನ್ನು ಪ್ರತಿದಿನವೂ ರಾತ್ರೆ 9 ಘೆಂಟೆಗೆ ಮುಚ್ಚಬೇಕು. ಪ್ರಾರ್ಥನಕಾಲ 6 ಘೆಂಟೆವರವಿಗೂ ತೆರಿಯ ಕೂಡದು.

VII. ಅಸಿಸ್ಟೆಂಟ್ ಕಮ್ಮಿಷನರ ದರ್ಜೆಗೆ ಕಮ್ಮಿಯಿಲ್ಲದ ಯಾವ ಆಫಿಸರೇ ಆಗಲಿ ಅಥವಾ ಅಂಥಾ ಆಫಿಸರಿಂದ ಅಧಿಕಾರ ಹೊಂದಿದಂಥಾ ಯಾವ ಯಕ್ಸೈಜ್ ಆಫಿಸರೇ ಆಗಲಿ ಕೇಳಿದಾಗ ಲೈಸೆನ್ಸದಾರನು ಬಿಕರೀ ಬಗ್ಯೆ ಕೊಡೋಣಾದ ಈ ಲೈಸೆನ್ಸ ಅನುಸರಿಸಿ ತರಿದಂಥಾ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿ ಯಿವುಗಳ ಅಸಲ್ ಇನ್ವಾಯಿಸ್ ಲೆಖ್ಖವನ್ನ ಹಾಜರ್ಮಾಡಲಿಕ್ಕೆ ಬದ್ಧನಾಗಿರತಕ್ಕದ್ದು.

VIII. ಈ ಲೈಸೆನ್ಸದಾರನು ರೂಲ್ಸ ಅನುಸರಿಸಿ ಪರಾಯಿ ದೇಶದ ಯಾವ ಬಗೆಯಾದ ಸ್ಪಿರಿಟ್ ಯಾ ಉಕ್ಕಿದ ಸಾರಾಯಿಯನ್ನ ಮಾರಲಿಕ್ಕಾಗಿ ಲೈಸೆನ್ಸ ಪಡೆದಂಥಾ ಇತರ ಲೈಸೆನ್ಸದಾರನಿಗೆ ಸದರೀ ಸಾರಾಯಿಯನ್ನ ಮಾರಲೂಬಹುದು ಅಥವಾ ವರ್ಗ ಮಾಡಲೂಬಹುದು. ಹಾಗೆ ಮಾರುವಣ ಯಾ ವರ್ಗ ಮಾಡುವಣ ಈ ಬಗ್ಯಾಗಿ ಮುಂಚಿತವಾಗಿ ಎಕ್ಸೈಜ್ ಇಲಾಖೆಯಲ್ಲಿ ಡಿಪ್ಯೂಟಿ ಕಮ್ಮಿಷನರವರ ರುಜೂ ಮೊಹರಿನಿ ಪರ್ಮಿಟ್ ಯಾನೆ ಬರಹ ಮೂಲಕವಾದ ರವದಾರಿಯ ಯರಡು ಪ್ರತಿಗಳನ್ನ ಪಡೆದ ಹೊರ್ತು, ನಡಿಯಕೂಡದು. ಹಾಂಗೆ ಖರೀದಿ ಯಾ ವರ್ಗ ಮೂಲಕ ಪಡೆದ ಲೈಸೆನ್ಸದಾರನು ಆ ಬಗ್ಯಾಗಿ ಸದರೀ ರಹದಾರಿಯ ಮುಯ್ಯಂ ಪ್ರತಿಯನ್ನ ದಸ್ತ್ರೈವಜ್ ತೀರಿಕು ತನ್ನ ಬಳಿಯಿಟ್ಟುಕೊಂಡಿದ್ದು, ಯಕ್ಸೈಜ್ ಇಲಾಖೆಯ ಯಾವ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು. ಸದರೀ ರಹದಾರಿಯ ಅವ್ವಲ್ ಪ್ರತಿಗೆ ವಿಕ್ರಯದಾರ ವ ಖರೀದಿದಾರ ಈ ವುಭಯತ್ರರೂ ರುಜೂವ ಮಾಡಿ ತಾರೀಖು ನಮೂದ್ನಿನಿ ಡಿಪ್ಯೂಟಿ ಕಮ್ಮಿಷನರವರ ಯಕ್ಸೈಜ್ ಇಲಾಖೆಗೆ ವಾಪಸ್ ರವಾನೆ ಮಾಡತಕ್ಕದ್ದು.

IX. ಲೈಸೆನ್ಸದಾರನು ಯಿಡುವ ಲೆಖ್ಖದಲ್ಲಿ, ತಿಂಗಳು ತಾರೀಖು ವ ಪರಾಯಿ ದೇಶದ ಸ್ಪಿರಿಟ್ ವ ಉಕ್ಕಿದ ಸಾರಾಯಿಗಳ ತೇದಾದು, ವ ತರಹೆಗಳು, ಯಾವ ಮೂಲಕವಾಗಿ ಪಡೆದುಕೊಂಡದ್ದು, ಬಿಕರೀ ಆದ ತೇದಾದು ವ ಅದರ ಮೊಬಲಗು, ಯಾವಗೆ ಬಿಕರೀ ಆಯಿತೊ ಅವನ ಹೆಸರು, ಮತ್ತು ರೋಜೆನಾ ಹಾಜರೀ ಸರಕು, ಯಿವುಗಳ ಸಾಚಾ ವ ಕರಾರ್‌ವಾಕಾ ತಪಶೀಲು ನಮೂದಿರತಕ್ಕದ್ದು. ಈ ಲೆಖ್ಖಗಳು ಯಾವಾಗಲೂ ಯಕ್ಸೈಜ್ ಇಲಾಖೆಯ ಆಫಿಸರುಗಳ ತನಪೀಗೆ ಗುರಿಯಾಗಿರತಕ್ಕದ್ದು. ಸದರೀ ಲೆಖ್ಖದ ಗೋಷ್ವಾರೆಯನ್ನ ತನಪೀಯಿಂದ ಡಿಪ್ಯೂಟಿ ಕಮ್ಮಿಷನರವರ ಆಫಿಸಿನ ಯಕ್ಸೈಜ್ ಇಲಾಖೆಗೆರವಾನಿಸತಕ್ಕ ಬಗ್ಯಾಗಿ ವೊಕರರಾಗಿರುವ ಯಕ್ಸೈಜ್ ಆಫಿಸರಬಳಿಗೆ ತಿಂಗಳಿಗೊಂದಾವರ್ತಿ ಯರಡು ಪ್ರತಿಗಳು ರವಾನಿಸಲ್ಪಡತಕ್ಕದ್ದು.

X. ಈ ಲೈಸೆನ್ಸು ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ. ಮತ್ತು ಯಿದರಲ್ಲಿ ನಮೂದಿರುವವನೇ ಹೊರ್ತು ಅನ್ಯಥಾ ಯಾರಿಗೆ ಆಗಲಿ ಈ ಲೈಸೆನಿನ ಷರತ್ತುಗಳನ್ನನುಸರಿಸಿ ನಡೆಯತಕ್ಕ ಅಧಿಕಾರ ವಿರುವದಿಲ್ಲ.

XI. ಲೈಸೆನ್ಸದಾರನು ದುಕಾನಿನಲ್ಲಿ ತನಿಗಾಗಿ ಕೆಲಸ ನಡಿಸತಕ್ಕ ಬ್ಯೈ ದುರ್ಕಾದಾರನ್ನ ಯಾ ಬಿಕರೀದಾರನ್ನ ಮೊಕರ್ರಾಡ ಬಹುದು. ಪರಂತು ಅಂಥಾ ಮನುಷ್ಯ ಯಾ ಮನುಷ್ಯರ ಹೆಸರು ಮೊದಲೇ ಡೆಪ್ಯುಟಿ ಕಮ್ಮಿಷನರವರ ಆಫಿಸಿನಲ್ಲಿ ರಜಿಸ್ಟರಾಗಿರತಕ್ಕ ದ್ದು. ಮತ್ತು ಅಂಥಾ ದುರ್ಕಾದಾರ ಯಾ ಬಿಕ್ರೀದಾರನ ಹೆಸರು ಈ ಲೈಸೆನ್ಸಿನ ಮೇಲ್ಭಾಗದಲ್ಲಿ ಬರದಿರತಕ್ಕದ್ದು.

XII. ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಲೈಸೆನ್ಸದಾರನು ಎಕ್ಸೈಜ್ ಕಾನೂನಿನಲ್ಲಿ ವ ಆದ ಕ್ಕನುಸರಿಸಿ ಮಾಡೋಣಾದ ನಿಬಂಧನೆಗಳಲ್ಲಿ ವಿಧಿಸಿರುವ ದಂಡನೆಗಳಿಗೆಲ್ಲ ಗುರಿಯಾಗುವದಲ್ಲದೆ, (1885ನೇ ಇಸವಿಯ ಮೈಸೂರ IIIನೇ ರೆಗ್ಯುಲೇಷನ್ ಯಂಬ) 1881ನೇ ಇಸವಿ XXIIನೇ ಆಕ್ಟಿನ 13ನೇ ಸೆಕ್ಷನ್ ಮೇರಿಗೆ ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರಿದಂತೆ ಲೈಸೆನ್ಸ ಸಹ ರದ್ದಾಗಲಿಕ್ಕೆ ಗುರಿಯಾಗಿರತಕ್ಕದ್ದು.

XIII. ಈ ಲೈಸೆನ್ಸ 18 ನೇ ಇಸವಿ ಮಾರ್ಚ್ 31ರ ವರಿವಿಗೆ ಜಾರೀಲಿರತಕ್ಕದ್ದು.

_____ ಡಿಸ್ಟ್ರಿಕ್ಟು
ಡೆಪ್ಯುಟಿ ಕಮ್ಮಿಷನರ ಆಫಿಸ್
ತಾರೀಖು ನೇ

_____ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು.

ಈ ಕೆಳಗೆ ರುಜುಮಾಡಿರುವಂಥಾ _____ ಲ್ಲಿ ವಾಸವಾಗಿರುವ
ನ ಮಗನಾದ _____ ಯಂಬ ನಾನು ಮೇಲ್ಕಂಡ ಲೈಸೆನ್ಸಿನಾರನಾಗಿಯೂ ನನಿಗಾಗಿ, ನನ್ನ ವಾರಸ್ದಾರ್‌ಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ, ಇದರ ಬೆಶಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸೋಣಾದ ಕರಾರುಗಳಿಗೂ ವ ಷರತ್ತುಗಳಿಗೂ ಒಪ್ಪಿರುತ್ತೇನೆ.

_____ ಶಿಂಗಳ _____ ನೇ ತಾರೀಖಿನಲ್ಲಿ _____ ರವರ ಕಚೇರಿಯಲ್ಲಿ
ನನ್ನಗಳ ರೂಬರೂ ರುಜು ಮೊಹರಿನೊಡನೆ ವೈಪ್ಪಿನಲ್ಪಟ್ಟರುತ್ತೆ.

ಸಾಕ್ಷಿಗಳು.

1 _____
2 _____
3 _____

_____
ಲೈಸೆನ್ಸದಾರ್

ಯಾರ ರೂಬರೂ ರುಜು ಮಾಡಲ್ಪಟ್ಟಿತೋ ಆ ಆಫಿಸರ ರುಜು.

ಬೆಂಗಳೂರು ವ ಮೈಸೂರು ಷಹರಗಳ ಮ್ಯುನಿಸಿಪಲ್ ರೆಗ್ಯುಲೇಷನಿನ 58ನೇ ಸೆಕ್ಷನ್ ಅನುಸರಿಸಿ ರಜಿಸ್ಟರ್ ಮಾಡಿದ ಬ್ಯೈಸರಟಿಫಿಕೇಟ್.

(ಇಲ್ಲಿ ಸರಟಿಫಿಕೇಟಿನ ನಮೂನೆ ದಾಖಿಲ್ಮಾಡಲ್ಪಡತಕ್ಕದ್ದು)

ತಾರೀಖು _____ ನೇ _____

ವೈಸಿಡೆಂಟ್ (ಅಥವಾ ವೈಸ್ ವೈಸಿಡೆಂಟ್)
_____ ಮ್ಯುನಿಸಿಪ್ಯಾಲಿಟಿ.

ಹೊಟೇಲ್‌ಗಳಲ್ಲಿ ಮತ್ತು ವೇತನಾನ್ನ ಶಾಲಾಗಳಲ್ಲಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಮ ಪರಾಯಿ ದೇಶದ ಉಕ್ಕಿದ ಸಾರಾಯಿ ಯಿವುಗಳನ್ನ ಮಾರುವ ಬಗ್ಯಾಗಿ ಕೊಡೋಣಾದ ಲೈಸೆನ್ಸ.

_____ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಾದ _____ ಯಂಬ ಹೆಸರುಳ್ಳ ನಾನು _____ ಹೊಟೇಲ್ ಯಂಬ ಹೆಸರುಳ್ಳ ಹೊಟೇಲನ್ನು ಯಿಟ್ಟುಕೊಂಡು _____ಲ್ಲಿ ವಾಸವಾಗಿರುವ _____ನ ಮಗನಾದ _____ ಯಂಬುವನಿಗೆ ಇದರಡಿ ಕಂಡ ಷರತ್ತುಗಳಿಗೂ ಮತ್ತು ಸಾಲೀನಾ _____ ರೂಪಾಯಿಗಳ ಲೈಸೆನ್ಸ ಫೀ ತೆರಲಿಕ್ಕೆ ಬದ್ಧನಾಗಿ _____ ಸ್ಥಳದಲ್ಲಿರುವ _____ನೇ ನಂಬರುಳ್ಳ ಆವರಣದೊಳಗೆ ಪರಾಯಿದೇಶದ ಸ್ಪಿರಿಟ್ ಸಾರಾಯಿಯನ್ನೂ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನೂ ಚಿಲ್ಲರೆಯಾಗಿ ಮಾರಲಿಕ್ಕೆ ಇದರಿಂದ ಅಧಿಕಾರ ಕೊಟ್ಟಿರುತ್ತೇನೆ.

ಷರತ್ತುಗಳು.

I. ಈ ಲೈಸೆನ್ಸದಾರನು ತತ್ಕಾಲ ಜಾರೀಲಿರುವ ಎಕ್ಸೈಜ್ ಕಾನೂನಿಗೂ ಮತ್ತು (1885ನೇ ಇಸವಿಯ IIIನೇ ಮೈಸೂರ ರೆಗ್ಯುಲೇಶನ್) 1881ನೇ ಇಸವಿ XXIIನೇ ಎಕ್ಸೈಜ್ ಆಕ್ಟಿನ 55ನೇ ಸೆಕ್ಷನನ್ನನುಸರಿಸಿ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಯೇರ್ಪಡಿಸೋಣಾದ ಯಲ್ಲ ನಿಬಂಧನೆಗಳ ಮೇರಿಗೆ ನಡೆದುಕೊಳ್ಳಲಿಕ್ಕೂ ಬದ್ಧನಾಗಿರತಕ್ಕದ್ದು.

II. (a) ಇವಕ್ಕೆ ಲಗ್ಗತ್ತ ಇರುವ ಪಟ್ಟಿಯಲ್ಲಿ ವಿವರಿಸೋಣಾದ ಗುರ್ತುಗಳುಳ್ಳ (ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನಾಗಲಿ, ಅಥವಾ ಪರಾಯಿ ದೇಶದ ಉಕ್ಕಿದ ಸಾರಾಯಿ, ಸಂಗತ್ಯಾನುಸಾರ) ಯಾವ ಸಾರಾಯಿಯನ್ನಾಗಲಿ ಮಾರಲಿಕ್ಕೆ ಈ ಲೈಸೆನ್ಸ ಕೊಡಲ್ಪಟ್ಟಿರುತ್ತೆ. ಡೆಪ್ಯುಟಿ ಕಮ್ಮಿಷನರು ತಾವಾಗಿಯೇ ಆಗಲಿ ಅಥವಾ ಲೈಸೆನ್ಸದಾರನು ಅರ್ಜೀ ಕೊಟ್ಟ ಮೇಲಾಗಲಿ, ಅಂಥಾ ಪಟ್ಟಿಗೆ ಹೊಸದಾಗಿ ಕೇರಿಸುವದಕ್ಕೂ ಯಾ ಬದಲಾಯಿಸುವದಕ್ಕೂ ಸ್ವತಂತ್ರವುಳ್ಳವರಾಗಿದ್ದಾರೆ. ಪಟ್ಟಿಯ ಪ್ರತಿ ಬದಲಾವಣೆಗೂ ಡೆಪ್ಯುಟಿ ಕಮ್ಮಿಷನರವರು ರುಜು ಮಾಡತಕ್ಕದ್ದು.

(b) ಸದರೀ ಪಟ್ಟಿಯಲ್ಲಿ ಬದಲಾವಣೆಯೊಂದಿಗೆ ಇರುವ ಗುರ್ತುಗಳ ಪೈಕಿ ಯಾವದಾದರೊಂದು ಗುರ್ತಿಲ್ಲದ ಯಾವ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಈ ಲೈಸೆನ್ಸಿನ ದೆಸೆಯಿಂದ ಮಾರಲ್ಪಡತಕ್ಕದ್ದಲ್ಲವು.

(ಯಾವಗುರ್ತುಳ್ಳ ಸಾರಾಯಿ.ಯ ಬೆಕರೀಬಗ್ಯೆ ಈ ಲೈಸೆನ್ಸ ಕೊಡಲ್ಪಟ್ಟಿರುತ್ತೊ ಆ ಬಾಬತು ಪಟ್ಟಿಯನ್ನು ಯಿಲ್ಲಿ ದಾಖಲ್ಮಾಡತಕ್ಕದ್ದು.)

III. ಮೇಲೆ ಹೇಳಲ್ಪಟ್ಟ ಹೊಟೇಲ್ ಆವರಣಗಳಿಂದ ಹೊರಗೆ ಪರಾಯಿ ದೇಶದ ಯಾವ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಸಾಗಿಸಲ್ಪಡಲೀಸಕೂಡದು ಮತ್ತು ಈ ಲೈಸೆನ್ಸ ಅನುಸರಿಸಿ ಮಾರಲ್ಪಡುವ ಪರಾಯಿ ದೇಶದ ಯಲ್ಲ ಸ್ಪಿರಿಟ್ ಸಾರಾಯಿ ಅಥವಾ ಉಕ್ಕಿದ ಸಾರಾಯಿಯನ್ನ ಆವರಣದೊಳಗೇನೇ ಕುಡಿಯತಕ್ಕದ್ದು. VIIನೇ ಕಲಮಿನ ಪ್ರತಿನ ಮೇರಿಗೆ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿ ಇವುಗಳನ್ನ ಹೊಟೇಲ್ ಆವರಣದಿಂದ ಸಾಗಿಸುವ ವಿಷಯದಲ್ಲಿ ಈ ಷರತ್ತು ಲಾಗಾವಾಗತಕ್ಕದ್ದಲ್ಲವು.

IV. (i) ಯಾವ ಬಗೆಯಾದ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನ ಎಷ್ಟು ಮಟ್ಟಿಗಾಗಲಿ ಕರ್ನಾಡಿಂಗ್ ಆಫಿಸರರ ಯಾ ಆ ಬಗ್ಯೆ ಅಂಥಾ ಆಫಿಸರಿಂದ ಕೈವಾಗಿ ಅಧಿಕಾರ ಹೊಂದಿದ ಯಾವನಾದರೊಬ್ಬ ಮನುಷ್ಯನ ಬರಹ ಮೂಲಕವಾದಅಪ್ಪಣೆ ಶಿವಾಯಿ ಯಾವ ಯೂರೋಪಿಯರ್ ಕಾರ್ಮಿಷನೆಡ್ ಆಫಿಸರ ಯಾ ಪ್ರೈವೇಟ್ ಸೋಲ್ಜರಿಗಾಗಲಿ ಯಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾ ಕೇರಿದ ಯಾವ ಯೂರೋಪಿಯರ್ ಯಾ ಈಸ್ಟ್ ಇಂಡಿಯರ್ ಹೆಂಗಸರಿಗಾಗಲಿ ಮಾರಲೂಕೂಡದು, ಕೊಡಲೂ ಕೂಡದು, ಮತ್ತು ಅಂತಾ ಬರಹಮೂಲಕವಾದ ಅಪ್ಪಣೆಯನ್ನ, ಲೈಸೆನ್ಸದಾರನು ಹಾಗೆ ಮಾಡಾಟ ಮಾಡಿದ್ದಕ್ಕಾಗಿ ದಸ್ತ್ಗೆವಜ್ ತರೀಕ್ ತನ್ನಬಳಿ ಇಟ್ಟುಕೊಂಡಿದ್ದು ಯಾವ ಎಕ್ಸೈಜ್ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು.

(ii.) ಮೇಲೆ ಹೇಳೋಣಾದ ಹೊಟೆಲ್‌ನಲ್ಲಿ ನಡೆಯುವ ವ್ಯಾಪಾರವು ಆ ಹೊಟೆಲನಲ್ಲಿ ಬಂದು ಯಿರುವ ಜನಗಳ ಸ್ವಂತ ಉಪಯೋಗಕ್ಕಾಗಿದೂಗಲಿ ಅಥವಾ ಅವರಿಂದ ಕರೆಕೊಳ್ಳಲ್ಪಡುವ ಜನಗಳ ಸ್ವಂತ ವುಪಯೋಗಕ್ಕಾಗಲಿ ಮಾತ್ರವೇ ನಡೆಯತಕ್ಕದ್ದು.

V. (a) ಲೈಸೆನ್ಸದಾರನು ಮೇಲೆ ಹೇಳಲ್ಪಟ್ಟ ಸಾರಾಯಿ ಯಾ ಉಕ್ಕಿದ ಸಾರಾಯಿ ಯೊಂದಿಗೆ ನೀರು ಸೇರಿಸಕೂಡದು ಯಾ ಬೆರಕೆ ಮಾಡಕೂಡದು; ಮತ್ತು ನೀರು ಕೇರಿರುವಂಥಾ ಯಾ ಬೆರಕೆಯಾಗಿರುವಂತಾ ಸಾರಾಯಿ ಯಂದು ತಿಳಿದು ಮಾರಲೂ ಕೂಡದು.

(b) ಮೇಲೆ ಹೇಳಲ್ಪಟ್ಟ ಹೊಟೇಲ್ ಯಾ ಆವರಣದಲ್ಲಿ ಮತ್ತೇರಿ ಬೀಳುವಂತೆ ಆಥವಾ ಅಕ್ರಮವಾದ ನಡತೆ ನಡೆಯಲೀಸ ಕೂಡದು.

(c) ಆ ಸ್ಥಳದಲ್ಲಿ ಯಾವ ವಿಧವಾದ ಜಾಜನ್ನಾಗಲಿ ಆಡುವಂತೆ ಮುನಃಪೂರ್ತಿಯಾಗಿ ಅಸ್ಪದ ಕೊಡಕೂಡದು.

(d) ವ್ಯಭಿಚಾರಿಗಳನ್ನಾಗಲಿ, ಪ್ರಸಿದ್ಧವಾದ ದುರ್ನಡತೆಯುಳ್ಳ ಜನಗಳನ್ನಾಗಲಿ, ತನಿಗೆ ತಿಳಿದು ಬರುವಂತೆಯಾದರೂ ಅಥವಾ ಆ ಸ್ಥಳದಲ್ಲಿ ಇರುವಂತೆಯಾದರೂ ಮಾಡಕೂಡದು.

(e) ಮತ್ತು ಫರಾರಿಯಾಗಿಬಿಂದ ಯಾವ ಯೂರೋಪಿಯರ್ ಸೋಲ್ಜರಿಗಾದರೂ ಮುನಃಪೂರ್ತಿಯಾಗಿ ಆಸರೆ ಕೊಡಕೂಡದು ಯಾ ಅಂಥಾವನ್ನ ಅಲ್ಲಿ ಬೈಟಿಡಲೂಕೂಡದು.

VI. ಅಸಿಸ್ಟೆಂಟ್ ಕಮ್ಮಿಷನರ ದರ್ಜೆಗೆ ಕಮ್ಮಿಯಿಲ್ಲದ ಯಾವ ಆಫಿಸರೇಆಗಲಿ ಅಥವಾ ಅಂಥಾ ಆಫಿಸರಿಂದ ಅಧಿಕಾರ ಹೊಂದಿದಂತಾ ಯಾವ ಎಕ್ಸೈಜ್ ಆಫಿಸರೇಆಗಲಿ ಕೇಳಿದಾಗ ಲೈಸೆನ್ಸದಾರನು, ಬಿಕರೀ ಬಗ್ಯೆ ಕೊಡೋಣಾವ ಈ ಲೈಸೆನ್ಸ್ ಅನುಸರಿಸಿ ತರಿಸಿದಂತಾ ಪರಾಯಿದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿ ಇವುಗಳ ಅಸಲ್ ಇನ್ವಾಯಿಸ್ ಲೆಕ್ಕವನ್ನ ಹಾಜರ್ಮಾಡಲಿಕ್ಕೆ ಬದ್ಧನಾಗಿರತಕ್ಕದ್ದು.

VII. ಈ ಲೈಸೆನ್ಸದಾರನು ತನ್ನ ಕೆಲಸವನ್ನು ನಿಲ್ಲಿಸಿಬಿಡಬೇಕಾದಾಗ _____ _____ ರೂಲ್ಸ್ ಅನುಸರಿಸಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನ ಮಾರಲಿಕ್ಕಾಗಿ ಲೈಸೆನ್ಸ್ ಪಡೆದಂಥಾ ಯಿತರ ಲೈಸೆನ್ಸದಾರನಿಗೆ ಸದರೀ ಸಾರಾಯಿಯನ್ನ ಮಾರಲೂಬಹುದು, ಅಥವಾ ವರ್ಗ ಮಾಡಲೂಬಹುದು ;ಹಾಗೆ ಮಾರಬೇಕಾದರೆಯಾಗಲಿ ಯಾ ವರ್ಗಮಾಡಬೇಕಾದರೆಆಗಲಿ ಡಿಪ್ಯುಟಿ ಕಮ್ಮಿಷನರವರ ಎಕ್ಸೈಜ್ ಇಲಾಖೆಯಿಂದ ರುಜುಮೊಹರನಿಟ್ಟ ಡ್ಯೂಪ್ಲಿಕೇಟ್ ರಹದಾರಿಯನ್ನ ಮುಂಚಿತವಾಗಿ ಪಡೆಯದೇ ಮಾರಲೂ ಕೂಡದು, ವರ್ಗ ಮಾಡಲೂ ಕೂಡದು. ಖರೀದಿ ಮೂಲಕ ಯಾ ವರ್ಗಮೂಲಕ ಪಡೆದುಕೊಂಡ ಲೈಸೆನ್ಸದಾರನು ಹಾಗೆ ಪಡೆಕೊಂಡದ್ದಕ್ಕಾಗಿ ಸದರೀ ರಹದಾರಿಯ ಯರಡನೇ ಪ್ರತಿಯನ್ನ ದಸ್ತೈವಜಾಗಿ ತನ್ನಬಳಿಯಿಟ್ಟುಕೊಂಡಿದ್ದು ಎಕ್ಸೈಜ್ ಆಫಿಸರು ತನಿಬೆ ಬಗ್ಯೆ ಯಾವಾಗಲಾದರೂ ಕೇಳಿದಾಗ ಅದನ್ನು ತೋರಿಸತಕ್ಕದ್ದು. ಖರೀದಿಮಾಡಿದವನು ವ ಖರೀದಿಗೆತಗದುಕೊಂಡವನು ಈ ಉಭಯಹತ್ರರೂ ಅಸಲ್ ರಹದಾರಿಗೆ ತಾರೀಖ್ ನಮೂದಿಸಿ ರುಜುಮಾಡಿ ಡಿಪ್ಯುಟಿ ಕಮ್ಮಿಷನರ ಎಕ್ಸೈಜ್ ಆಫಿಸಿಗೆ ವಾಪಸು ಕಳುಹಿಸತಕ್ಕದ್ದು.

VIII. ಲೈಸೆದಾರನು ಯಿಹುವ ಲೆಕ್ಕದಲ್ಲಿ ತಿಂಗಳು, ತಾರೀಖು, ಪರಾಯಿದೇಶದ ಸ್ಪಿರಿಟ್ ವ ಉಕ್ಕಿದ ಸಾರಾಯಿಗಳ ತೇದಾದ್ದು, ಮತ್ತು ತರಹೆಗಳು ಯಾವ ಮೂಲಕವಾಗಿ ಪಡದುಕೊಂಡದ್ದು, ಬಿಕರಿ ಆದ ತೇದಾದು ವ ಅದರ ಮೊಬಲಗು ಮತ್ತು ರೋಜೇನಾ ಹಾಜರಿ ಸರಕು ಯಿವುಗಳ ನಾಚಾ ವ ಕರಾರ್‌ವಾರಿ ತಪಶೀಲ್ ನಮೂದಿರತಕ್ಕದ್ದು. ಈ ಲೆಕ್ಕಗಳು ಯಾವ ಕಾಲದಲ್ಲಾಗಲಿ ಎಕ್ಸೈಜ್ ಆಫಿಸರುಗಳ ತನಬಿಗೆ ಒಳಪಟ್ಟಿರತಕ್ಕದ್ದು. ಈ ಲೆಕ್ಕದ ಗೋಪ್ಯಾರೆಯನ್ನ ತನಬೀಯಿಂದ ಡಿಪ್ಯುಟಿ ಕಮ್ಮಿಷನರವರ ಆಫಿಸಿನ ಎಕ್ಸೈಜ್ ಇಲಾಖೆಗೆ ರವಾನಿಸತಕ್ಕ ಬಗ್ಯಾಗಿ ಮೊಕರರಾಗಿರುವ ಎಕ್ಸೈಜ್ ಆಫಿಸರ ಬಳಿಗೆ ತಿಂಗಳಿಗೊಂದಾವರ್ತಿ ಯರಡು ಪ್ರತಿಗಳು ರವಾನಿಸಲ್ಪಡತಕ್ಕದ್ದು.

IX. ಈ ಲೈಸೆನ್ಸು, ಡಿಪ್ಯುಟಿ ಕಮ್ಮಿಷನರವರ ಲಿಖಿತ ಮೂಲಕವಾದ ಅಪ್ಪಣೇ ಯಿನಾ ಕ್ರಯ, ದಾನ, ಭೋಗ್ಯ ಯಿ ಮತ್ತಾವ ರೀತಿಯಿಂದಲೂ ಪರಭಾರೆಯಾಗತಕ್ಕದ್ದಲ್ಲವು.

X. ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿನಡೆದರೆ ಲೈಸೆನ್ಸದಾರನು, ಎಕ್ಸೈಜ್ ಕಾನೂನಿನಲ್ಲಿ ವ ಆದಕ್ಕನುಸರಿಸಿ ಮಾಡೋಣಾವ ನಿಬಂಧನೆಗಳಲ್ಲಿ ವಿಧಿಸುವ ದಂಡನೆಗಳಿಗೆಲ್ಲ ಗುರಿಯಾಗುವದಲ್ಲದೆ, (1885ನೇ ಇಸವಿಯ ಮೈಸೂರ III‌ನೇ ರೆಗ್ಯುಲೇಷನ್) ಎಂಬ 1881ನೇ ಇಸವಿ XXII‌ನೇ ಆಕ್ಟಿನ 13ನೇ ಸೆಕ್ಷನ್. ಮೇರಿಗೆ ಡಿಪ್ಯುಟಿ ಕಮ್ಮಿಷನರವರಿಗೆ ಯುಕ್ತತೋರಿದಂತೆ ಲೈಸೆನ್ಸ್ ಸಹ ರದ್ದಾಗಲಿಕ್ಕೆ ಗುರಿಯಾಗಿರತಕ್ಕದ್ದು.

XI. ಈ ಲೈಸೆನ್ಸ್ 18 ನೇ ಇಸವಿ ಮಾರ್ಚ್ 31ರ ವರಿವಿಗೆ ಜಾರೀಲಿರತಕ್ಕದ್ದು.

_____ ಡಿಪ್ಯುಟಿ ಕಮ್ಮಿಷನರ ಆಫಿಸ್
ತಾರೀಖು ನೇ

_____ ಡಿ॥ ಡಿಪ್ಯುಟಿ ಕಮ್ಮಿಷನರ್.

ಈ ಕೆಳಗೆ ರುಜು ಮಾಡಿರುವಂಥಾ _____ ಲ್ಲಿ ವಾಸವಾಗಿರುವ _____

ನ ಮಗನಾದ _____ ಯಂಬ ನಾನು ಮೇಲ್ಕಂಡ ಲೈಸೆನ್ಸದಾರನಾಗಿ ನನಿಗಾಗಿಯೂ ನನ್ನ ವಾರಸ್ದಾರ

ರುಗ್ಗೋಸ್ಕರವೂ ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ, ಮತ್ತು ವರ್ಗ ಪಡೆದಂಥಾವರಿಗೋಸ್ಕರವೂ, ಇದರದೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸೋಣಾದ ಕರಾರುಗಳಿಗೂ ವ ಪರತ್ತುಗಳಿಗೂ ಒಪ್ಪಿರುತ್ತೇನೆ.

_____ ತಿಂಗಳ _____ನೇ ತಾರೀಖಿನಲ್ಲಿ _____ ರವರ ಈಚೇರಿಯಲ್ಲಿ ನಮ್ಮಿಗಳ ರೂಬರೂ ರುಜೂ ಮೊಹರಿನೊಡನೆ ಒಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು

1 _____)
2 _____)
3 _____)

_____
ಲೈಸೆನ್ಸದಾರ

ಯಾರ ರೂಬರೂ ರುಜೂ ಮಾಡಲ್ಪಟ್ಟಿತೋ ಆ ಆಫಿಸರ ರುಜು.

ಬೆಂಗಳೂರು ವ ಮೈಸೂರು ಪಟ್ಟಣಗಳ ಮ್ಯುನಿಸಿಪಲ್ ರೆಗ್ಯುಲೇಷನಿನ 58ನೇ ಸೆಕ್ಷನ್ ಅನುಸರಿಸಿ ರಿಜಿಸ್ಟರ್ ಮಾಡಿದ ಬ್ಯೈಸರ್ಟಿಫಿಕೇಟ್.

ತಾರೀಖು _____ನೇ

ಪ್ರೆಸಿಡೆಂಟ್ (ಅಥವಾ ವೈಸ್ ಪ್ರೆಸಿಡೆಂಟ್)
ಮ್ಯುನಿಸಿಪಾಲಿಟಿ.

ರಿಫ್ರೆಷ್‌ಮೆಂಟ್ ರೂಮ್ಸ್ ಅಂಡಿಗಳಲ್ಲಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನು ಮಾರತಕ್ಕ ಬಗ್ಗೆ ಲೈಸೆನ್ಸ್.

ಲೈಸೆನ್ಸಿನ ರಿಜಿಸ್ಟರ್ ನಂಬರು _____

ಲೈಸೆನ್ಸದಾರನ ಹೆಸರು _____

ದುಕಾನಾದಾರನ ಹೆಸರು _____

ದುಕಾನ್ ಇರುವ ಸ್ಥಳ { ಕಸಬಾ ಜಾಗಾ _____ ; ಬೀದಿ _____ ; ಆಂಗಡಿ ನಂಬರು _____

_____ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಾದ _____ ಹೆಸರುಳ್ಳ ನಾನು _____ ಲ್ಲಿ ವಾಸವಾಗಿರುವ _____ ಯಂಬವನ ಮಗನಾದ _____ ಎಂಬವನಿಗೆ ಈ ಕೆಳಗೆ ನಮೂದಾಗುವ ಪರತ್ತುಗಳನ್ನನುಸರಿಸಿ ಮತ್ತು ಸಾಲಿಯಾನಾ _____ ರೂಪಾಯಿಗಳ ಲೈಸೆನ್ಸ್ ಫೀಯನ್ನ ತೆರಲಿಕ್ಕೆ ಗುರಿಯಾಗಿ, ಮೇಲ್ಕಂಡ ಆವರಣದಲ್ಲಿ ಪರಾಯಿದೇಶದ ಸ್ಪಿರಿಟ್ ಸಾರಾಯಿಯನ್ನೂ ಮತ್ತು ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನೂ ಚಿಲ್ಲರೆಯಾಗಿ ಮಾರಲಿಕ್ಕೆ ಯಿದರಿಂದ ಅಧಿಕಾರ ಕೊಟ್ಟಿರುತ್ತೇನೆ.

ಪರತ್ತುಗಳು.

I. ಈ ಲೈಸೆನ್ಸದಾರನು, ತತ್ಕಾಲ ಜಾರೀಲಿರುವ ಎಕ್ಸೈಜ್ ಕಾನೂನಿಗೂ ಮತ್ತು (1885ನೇ ಇಸವಿಯ ಮೈಸೂರು IIIನೇ ರೆಗ್ಯುಲೇಷನ್) 1881ನೇ ಇಸವಿ XXIIನೇ ಯಕ್ಸೈಜ್ ಆಕ್ಟಿನ 55ನೇ ಸೆಕ್ಷನ್ನನ್ನನುಸರಿಸಿ ಶ್ರೀಮನ್ಮಹಾರಾಜರ ಸರ್ತಾರದವರಿಂದ ಯೇರ್ಪಡಿಸೋಣಾದ ಯಲ್ಲ ನಿಬಂಧನೆಗಳ ಮೇರಿಗೆ ನಡೆದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

II. (a) ಇದಕ್ಕೆ ಲಗ್ಗತ್ ಇರುವ ಪಟ್ಟಿಯಲ್ಲಿ ವಿವರಿಸೋಣಾದ ಗುರ್ತುಗಳುಳ್ಳ (ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿದೇಶದ ಸ್ಪಿರಿಟ್ ಸಾರಾಯಿ ವ ಪರಾಯಿದೇಶದ ಉಕ್ಕಿದ ಸಾರಾಯಿಯನ್ನಾಗಲಿ ಅಥವಾ ಪರಾಯಿದೇಶದ ಉಕ್ಕಿದ ಸಾರಾಯಿ ಸಂಗತ್ಯಾನುಸಾರ) ಯಾವ ಸಾರಾಯಿಯನ್ನಾಗಲಿ ಮಾರಲಿಕ್ಕೆ ಈ ಲೈಸೆನ್ಸ್ ಕೊಡಲ್ಪಟ್ಟಿರುತ್ತೆ. ಡೆಪ್ಯುಟಿ ಕಮ್ಮಿಷನರು ತಾವಾಗಿಯೇ ಆಗಲಿ ಅಥವಾ ಲೈಸೆನ್ಸದಾರನು ಅರ್ಜೀಕೊಟ್ಟ ಮೇಲಾಗಲಿ, ಆಂಥಾ ಪಟ್ಟಿಗೆ ಹೊಸದಾಗಿ ಕೇರಿಸುವದಕ್ಕೂ ಯಾ ಮತ್ತಾವ ರೀತಿಯಿಂದಲಾದರೂ ಬದಲಾಯಿಸುವದಕ್ಕೂ ಸ್ವತಂತ್ರವುಳ್ಳವರಾಗಿದ್ದಾರೆ. ಪಟ್ಟಿಯೊಳಗಣ ಪ್ರತಿ ಬದಲಾವಣೆಗೂ ಡೆಪ್ಯುಟಿ ಕಮ್ಮಿಷನರವರು ರುಜು ಮಾಡತಕ್ಕದ್ದು.

(b) ಸದರೀ ಪಟ್ಟಿಯಲ್ಲಿ ಬದಲಾವಣಿಯೊಂದಿಗೆ ನಮೂದಿರುವ ಗುರ್ತುಗಳ ವೈಕಿ ಯಾವದಾದರೊಂದು ಗುರ್ತಿಲ್ಲದ ಯಾವ ಪರಾಯಿದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಈ ಲೈಸೆನ್ಸಿನ ದೆಸೆಯಿಂದ ಮಾರಲ್ಪಡತಕ್ಕದ್ದಲ್ಲವು.

(ಯಾವ ಗುರ್ತುಳ್ಳ ಸಾರಾಯಿಯನ್ನ ಮಾರುವ ಬಗ್ಗೆ ಈ ಲೈಸೆನ್ಸು ಕೊಡಲ್ಪಟ್ಟಿರುತ್ತೋ ಆ ಬಾಬತು ಪಟ್ಟಿಯನ್ನ ಇಲ್ಲಿ ಪಾಖಲ್ಮಾಡಬೇಕು).

III. ಮೇಲ್ಕಂಡ ದ್ರುಕಾನಿನಲ್ಲಿ ಮಾತಲ್ಪಡುವ ತಮಾಂ ಪರಾಯಿದೇಶದ ಸ್ಪಿರಿಟ್ ಯಾ ಉಕ್ಕಿದ ಸಾರಾಯಿಯೂ, ಆವರಣದೊಳಗೇನೆ ಕುಡಿಯಲ್ಪಡಬೇಕೇ ಹೊರ್ತು XIನೇ ಷರತ್ತಿನಲ್ಲಿ ಕಂಡಂತೆ ವಿನಾ ಯಾವ ನೆಪದಿಂದಲೂಗಲಿ ದುಕಾನಿನಿಂದ ಹೊರಗೆ ವಯ್ಯಲ್ಪಡಕೂಡದು, ಪರಾಯಿದೇಶದ ಸ್ಪಿರಿಟ್ ಸಾರಾಯಿಯನ್ನ ಯಾವ ಒಬ್ಬ ಮನುಷ್ಯನಿಗಾಗಲಿ ಒಂದು ದಫೆಗೆ ಯರಡುದ್ದಾಂ ವರಿವಿಗೇನೇ ಕೊಡಲ್ಪಡತಕ್ಕದ್ದು.

IV. (1) ಯಾವ ಬಗೆಯಾದ ಪರಾಯಿದೇಶದ ಸ್ಪಿರಿಟ್ ಯಾ ಉಕ್ಕಿದ ಸಾರಾಯಿಯನ್ನ ಯಷ್ಟುಮಟ್ಟಿಗಾಗಲಿ ಕರ್ವಾಡಿಂಗ್ ಆಫಿಸರರ ಯಾ ಆ ಬಗ್ಗೆ ಆಂಥಾ ಆಫಿಸರಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವ ಮನುಷ್ಯನ ಬರಹ ಮೂಲಕವಾದ ಅಪ್ಪಣೆ ವಿನಾ ಯಿ ಯಾವ ಯೂರೋಪಿರ್ಯ ನಾ ಕಮ್ಮಿಷನೆಡ ಯಾ ಪ್ರೈವೆಟ್ ನೋಲ್ಜರಿಗಾಗಲಿ ಯಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾ ಕೀರಿದ ಯಾವ ಯೂರೋಪಿರ್ಯ ಯಾ ಈಸ್ಟ್ ಇಂಡಿರ್ಯ ಹೆಂಗಸರಿಗಾಗಲಿ ಮಾರಲೂ ಕೂಡದು ಕೊಡಲೂಕೂಡದು, ಮತ್ತು ಆಂಥಾ ಬರಹ ಮೂಲಕವಾದ ಅಪ್ಪಣೆಯನ್ನ ಲೈಸೆನ್ಸುದಾರನು ಹಾಗೆ ಮಾರಾಟ ಮಾಡಿದ್ದಕ್ಕಾಗಿ ದಸ್ತಾವೇಜ್ ತರೀಕ ತನ್ನಬಳಿ ಯಿಟ್ಟುಕೊಂಡಿದ್ದು ಯಾವ ಎಕ್ಸೈಜ್ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು.

(2) ಹದಿನಾರು ವರುಷಕ್ಕೆ ಕಮ್ಮಿಯಾದ ವಯಸ್ಸುಳ್ಳ ಯಾವ ಹುಡುಗನಿಗಾಗಲಿ ಯಾವ ಶಿಪಾಯಿಗಾಗಲಿ, ಪೋಲೀಸ್ ಕಿಬ್ಬಂದಿಗೆ ಕೀರಿದ ಯಾವ ಮನುಷ್ಯನಿಗೆ ಆಗಲಿ, ಯಾ ನೌಕರಿ ಮೇಲಿರುವ ರೈಲ್ವೆ ಕಂಪೆನಿಯ ನೌಕರನಿಗಾಗಲಿ, ಯಾವ ಬಗೆಯ ಪರಾಯಿದೇಶದ ಯಾ ಉಕ್ಕಿದ ಸಾರಾಯಿಯನ್ನ ಎಷ್ಟುಮಟ್ಟಿಗೂ ಕೊಡಲೂ ಕೂಡದು, ಯಾ ಮಾರಲೂ ಕೂಡದು.

V. ಈ ಲೈಸೆನ್ಸ್ ಅನುಸರಿಸಿ ಪರಾಯಿದೇಶದ ಸ್ಪಿರಿಟ್ ವ ಉಕ್ಕಿದ ಸಾರಾಯಿಯನ್ನ ಬಿಕರೀ ಮಾಡುವ ಸ್ಥಳವು ಬಹಿರಂಗವಾದ ದುಕಾನಾಗಿ ಯಿರತಕ್ಕದ್ದಲ್ಲದೆ ಬಾಗಲುಬಳಿ ಯಾ ಕಿಟಿಕಿಯಲ್ಲಿ ನಿಂತು ನೋಡುವಂತಾವನಿಗೆ ಒಳಗೆ ಯಿರತಕ್ಕವರೆಲ್ಲರೂ ಕಾಣ ಬರುವಂತೆ ಕಟ್ಟಲ್ಪಟ್ಟಿರತಕ್ಕದ್ದು, ಮತ್ತು ದುಕಾನಿನೊಳಗಿಂದ ಯಿನ್ನೊಂದು ಕೊಠಡಿಗಾಗಲಿ, ಆಂಗಳಕ್ಕಾಗಲಿ ಯಾ ಪಾಳಿಯುಳ್ಳ ವ ಠಾರಕ್ಕಾಗಲಿ ಹೋಗುವದಕ್ಕೆ ಅಸ್ಪದವಿರಕೂಡದು.

VI. ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೆಹಾಕಿ ಅದರ ಮೇಲೆ ದುಕಾನಿನ ನಂಬರು, ಲೈಸೆನುದಾರನ ಹೆಸರು ವ ಅಂಗಡಿಯವನ ಹೆಸರು, ಇವುಗಳು ವಿರಳವಾಗಿ ಬರೆಯಲ್ಪಟ್ಟಿರತಕ್ಕದ್ದು ಮತ್ತು ಮಾರಲ್ಪಡುವ ಷರಾಬುಗಳ ತಪ್ಪೇಲವಾರ ನಿರಖುಪಟ್ಟಿಯನ್ನ ಅಂಗಡಿಯೊಳಗೆ ಬಹಿರಂಗವಾಗಿ ತಗಲುಹಾಕಿರತಕ್ಕದ್ದು.

VII—(a) ಲೈಸೆನುದಾರನು ಮೇಲೆ ಹೇಳಲ್ಪಟ್ಟ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿ ಯೊಂದಿಗೆ ಮೋಸಕರವಾಗಿ ನೀರು ಬೆರಿಸಕೂಡದು ಯಾ ಬೆರಕೆ ಮಾಡಕೂಡದು ಮತ್ತು ಮೋಸಕರವಾಗಿ ನೀರು ಕೀರಿರುವಂಥಾ ಯಾ ಬೆರಕೆಯಾಗಿರುವಂಥಾ ಸಾರಾಯಿ ಯೆಂದು ತಿಳಿದು ಮಾರಲೂಕೂಡದು.

(b) ಮೇಲೆ ಹೇಳಲ್ಪಟ್ಟ ರಿಫ್ರೆಷ್‌ಮೆಂಟ್ ರೂಂ ಅಂಗಡಿಯಲ್ಲಿ ಯಾ ಆ ಆವರಣದೊಳಗೆ ಮತ್ತೇರಿಬೀಳುವಂತೆ ಅಥವಾ ಅಕ್ರಮವಾದ ನಡತೆ ನಡಿಯಲೀಕೂಡದು.

(c) ಅವುಗಳಲ್ಲಿ ಯಾವವಿಧವಾದ ಜೂಜನ್ನಾಗಲಿ ಆಡುವಂತೆ ಮನಃಪೂರ್ವಿಯಾಗಿ ಅಸ್ಪದಕೊಡಕೂಡದು.

(d) ವ್ಯಭಿಚಾರಿಯನ್ನಾಗಲಿ ಪ್ರಸಿದ್ಧವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ತನಿಗೆ ತಿಳಿದು ಬರುವಂತೆಯಾದರೂ ಅಥವಾ ಅಂಗಡಿಯಲ್ಲಿ ಇರುವಂತೆಯಾದರು ಮಾಡಕೂಡದು.

(e) ಮತ್ತು ಫರಾರಿಯಾಗಿ ಬಂದ ಯಾವ ಯೂರೋಪಿರ್ಯ ನೋಲ್ಜರಿಗಾದರೂ ಮನಃಪೂರ್ವಿಯಾಗಿ ಆಸರೆಕೊಡಕೂಡದು, ಅಥವಾ ಆಂತಾವನ್ನ ಅಲ್ಲಿ ಬೈಟಿಡಲೂಕೂಡದು.

VIII. ಈ ಲೈಸೆನ್ಸು ಮೇರಿಗೆ ಬಿಕರೀ ಮಾಡಲ್ಪಡುವ ದರೋಜಸ್ತು ಪರಾಯಿದೇಶದ ಸಾರಾಯಿ ಯಾ ಉಕ್ಕಿದ ಸಾರಾಯಿಯ ಖರೀದಿಗಾಗಿ ನಗದು ಹಣ ತೆಗದುಕೊಳ್ಳತಕ್ಕದ್ದೇ ಹೊರ್ತು ಸಾಲವಾಗಿ ಕೊಡಕೂಡದು ಅಥವಾ ಸಾರಾಯಿಗಾಗಿ ಯಾವ ವಸ್ತುವನ್ನಾಗಲಿ ಆಡವೂನವಾಗಿಯಾಗಲಿ ಯಾ ಬದಲಿಯಾಗಿಯಾಗಲಿ ಇಟ್ಟುಕೊಳ್ಳಕೂಡದು.

IX. ಅಂಗಡಿಯನ್ನ ಪ್ರತಿದಿನವೂ ರಾತ್ರಿ 9 ಘಂಟೆಗೆ ಮುಚ್ಚಲ್ಪಕು ಮತ್ತು ಪ್ರಾತಃಕಾಲ 6 ಘಂಟೆಗೆ ಮುಂಚಿತವಾಗಿ ತೆರೆಯಕೂಡದು. ಅಂಗಡಿಯು ಪ್ರಾತಃಕಾಲ 8 ಘಂಟೆ ಲಾಗಾಯತು ರಾತ್ರಿ 9 ಘಂಟೆವರಿಗೂ ತೆರೆದಿರತಕ್ಕದ್ದು.

X. ಅಸಿಸ್ಟೆಂಟ್ ಕಮ್ಮಿಷನರ್ ದರ್ಜೆಗೆ ಕಮ್ಮಿಯಿಲ್ಲದ ಯಾವ ಆಫಿಸರೇ ಆಗಲಿ ಅಥವಾ ಆಂಥಾ ಆಫಿಸರಿಂದ ಅಧಿಕಾರ ಹೊಂದಿದಂಥಾ ಯಾವ ಎಕ್ಸೈಜ್ ಆಫಿಸರೇ ಆಗಲಿ ಕೇಳಿದಾಗ ಲೈಸೆನುದಾರನು ಬಿಕರೀ ಬಗ್ಗೆ ಕೊಟ್ಟಿರುವ ಈ ಲೈಸೆನ್ಸು ಅನುಸರಿಸಿ

ಸ್ಪಿರಿಟ್ ಸಾರಾಯಿ ಯಾ ಉಕ್ತಿದ ಸಾರಾಯಿ ಇವುಗಳ ಅಸಲ್ ಇನ್‌ವಾಯಿಸ್ ಲಿಖ್ತವನ್ನು ಹಾಜ್ಯಾಗಲಿ

ದಾರನು ತನ್ನ ಕೆಲಸವನ್ನು ನಿಲ್ಲಿಸಿ ಬಿಡಬೇಕಾದಾಗ ರೊಲ್ಸು ಆನು

ಸಂಬಂಧ ಪರಾ ಟ್ ಸಾರಾಯಿ ಯಾ ಪರಾಯಿ ದೇಶದ ಉಕ್ತಿದ ಸಾರಾಯಿಯನ್ನು ಮಾರಲಿಕ್ಕಾಗಿ ಲೈಸೆನ್ಸು ಪಡೆದಂಥಾ ಇತರ
ಲೈಸೆನ್ಸುದಾ ಸಾರಾಯಿಯನ್ನು ಮಾರಬಹುದು ಅಥವಾ ವರ್ಗ ಮಾಡಬಹುದು. ಹಾಗೆ ಮಾಡಬೇಕಾದರೆ ಆಗಲೀ
ಯಾ ವರ್ಗ ರೆ ಆಗಲಿ ಡೆಪ್ಯೂಟಿ ಕಮ್ಮಿಷನರವರ ಯೆಕ್ಸೈಜ್ ಇಲಾಖೆಯಿಂದ ರುಜು ಮೊಹರನ್ನು ಪ್ರೊಪ್ರೈಕೇಟ್ ರಹದಾರಿ
ಯನ್ನು ರಿಯಲೇ ಮಾರಲೂ ಕೂಡದು ವರ್ಗ ಮಾಡಲೂಕೂಡದು ; ಖರೀದಿ ಮೂಲಕ ಯಾ ವರ್ಗವಾಗಿ ಪಡಕೊಂ
ಡ ಲೈ ಗೆ ಪಡಕೊಂಡದ್ದಕ್ಕಾಗಿ ಸದರೀ ರಹದಾರಿಯ ಎರಡನೇ ಪ್ರತಿಯನ್ನು ದಸ್ತೈವಜಾಗಿ ತನ್ನ ಬಳಿ ಯಿಟ್ಟುಕೊಂ
ಡಿರ ತ್ತಾನೆ ಬಗ್ಯೆ ಯಾವಾಗಲಾದರೂ ಕೇಳಿದಾಗ ಅದನ್ನು ತೋರಿಸತಕ್ಕದ್ದು. ಖರೀದಿವನಾಡಿದವನು ಮತ್ತು ಖರೀ
ದಿ ಭಯತ್ರರೂ ಅಸಲ್ ರಹದಾರಿಗೆ ತಾರೀಖು ನಮೂದಿಸಿ ರುಜುಮಾಡಿ ಡೆಪ್ಯೂಟಿ ಕಮ್ಮಿಷನರವರ ಎಕ್ಸೈ
ಸತಕ್ಕದ್ದು.

XII. ನು ಯಿಹುವ ಲಿಖ್ತದಲ್ಲಿ ತಿಂಗಳು, ತಾರೀಖು, ಪರಾಯಿದೇಶದ ಸ್ಪಿರಿಟ್ ವ ಉಕ್ತಿದ ಸಾರಾಯಿಗಳ ಕ್ವೇದಾ
ದು, ಮತ್ತು ಮೂಲಕವಾಗಿ ಪಡದುಕೊಂಡದ್ದು, ಬಿಕರಿಯಾದ ತೇದಾದು ವ ಅದರ ಪೊಬಲಗು, ಮತ್ತು ರೋಜೀನಾ
ಹಾಜರೀ ಸರಕಾ ಳ ವ ಕರಾರ್‌ವಾಕಾ ತಪಶೀಲ್ ನಮೂದಿಸತಕ್ಕದ್ದು; ಈ ಲಿಖ್ತಗಳು ಯಾವಕಾಲದಲ್ಲಾಗಲಿ ಎಕ್ಸೈಜ್
ಇಲಾಖೆಯ ಆಫೀ ರಿಗೆ ಒಳಪಟ್ಟಿರತಕ್ಕದ್ದು. ಈ ಲಿಖ್ತದ ಗೋಷ್ವಾರೆಯನ್ನು ತಿಂಗಳಿಯಿಂದ ಡೆಪ್ಯೂಟಿ ಕಮ್ಮಿಷನರವರ
ಆಫಿಸಿನ ಎಕ್ಸೈ ರಿಗೆ ರವಾನಿಸತಕ್ಕ ಬಗ್ಯೆ ಪೊಕರರಾಗಿರುವ ಎಕ್ಸೈಜ್ ಆಫಿಸರ ಬಳಿಗೆ ತಿಂಗಳಿಗೊಂದಾವರ್ತಿ ಯರಡು
ಪ್ರತಿಗಳು ರವಾನಿಸತಕ್ಕದ್ದು.

XIII. ಈ ಲೈಸೆನ್ಸು ಕ್ರಯ, ದಾನ, ಭೋಗ್ಯ ಯಾ ಮತ್ಯಾವ ರೀತಿಯಿಂದಲಾಗಲಿ ವರ್ಗವಾಗತಕ್ಕದ್ದಲ್ಲವು, ಮತ್ತು ಯಿದರ
ಲ್ಲಿ ನಮೂದಿರುವವರು ಹೊರತು ಅನ್ಯಥಾ ಯಾರಿಗೇ ಆಗಲಿ ಈ ಲೈಸೆನ್ಸಿನ ಷರತ್ತುಗಳನುಸರಿಸಿ ನಡಿಯಲಿಕ್ಕೆ ಅಧಿಕಾರ ಇರುವದಿಲ್ಲ.

XIV. ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿನಡೆದರೆ, ಲೈಸೆನ್ಸುದಾರ ಅಥವಾ ದುಕಾನ್‌ದಾರನು ಎಕ್ಸೈಜ್
ಕಾನೂನಿನಲ್ಲಿ ವ ಅದಕ್ಕನುಸರಿಸಿ ಮಾಡಿರುವ ನಿಬಂಧನೆಗಳಲ್ಲಿ ವಿಧಿಸಿರುವ ದಂಡನೆಗಳಿಗೆಲ್ಲ ಗುರಿಯಾಗುವದಲ್ಲದೆ (1885ನೇ ಇಸವಿ
ಯ ಮೈಸೂರು IIIನೇ ರೆಗ್ಯುಲೇಷನ್) ಮತ್ತು 1881ನೇ ಇಸವಿ XXIIನೇ ಆಕ್ಟಿನ 13ನೇ ಸೆಕ್ಷನ್ ಮೇರಿಗೆ ಡೆಪ್ಯೂಟಿ ಕಮ್ಮಿಷ
ನರವರಲಿಗೆ ಯುಕ್ತವೋದಿದಂತೆ ಲೈಸೆನ್ಸು ಸಹ ರದ್ದಾಗಲಿಕ್ಕೆ ಗುರಿಯಾಗಿರತಕ್ಕದ್ದು.

XV. ಈ ಲೈಸೆನ್ಸು 18 ನೇ ಇಸವಿ ಮಾರ್ಚಿ 31ರ ವರಿಗೆ ಜಾರೀಲಿರತಕ್ಕದ್ದು.

ದಿಸ್ಟ್ರಿಕ್ಟು ದಿಸ್ಟ್ರಿಕ್ಟು

ಡೆಪ್ಯೂಟಿ ಕಮ್ಮಿಷನರ್ ಆಫಿಸು ಡೆಪ್ಯೂಟಿ ಕಮ್ಮಿಷನರ್.

ತಾರೀಖು ನೇ

ಳಿಗೆ ರುಜು ಮಾಡುವಂಥಾ ಲ್ಲಿ

ವಾಸವಾಗಿರುವ ನ ಮಗನಾದ

ಎಂಬ ನಾನು

ಮೇಲ್ಕಂಡ ಲೈಸೆನ್ಸುದಾರನಾಗಿ, ನನಗಾಗಿಯೂ, ನನ್ನ ವಾರ್ಸದಾರ್‌ಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು
ವರ್ಗ ಪಡೆದಂಥಾವರಿಗೋಸ್ಕರವೂ ಯಿದರ ದೆಶೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸೋಕಾದ ಕರಾರುಗಳಿಗೂ ವ ಷರತ್ತುಗಳಿಗೂ
ಪೊಪ್ಪಿರುತ್ತೆನೆ.

ತಿಂಗಳ ನೇ ತಾರೀಖಿನಲ್ಲಿ

ರವರ ಕಛೇರಿಯಲ್ಲಿ ನನ್ನ ಗಳ ರೂಬರೂ ರುಜು ವ ಮೊಹರನೊಡನೆ ಪೊಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು

1

2

3. ಲೈಸೆನ್ಸುದಾರ್

ಯಾರ ರೂಬರೂ ರುಜು ಮಾಡಲ್ಪಟ್ಟಿತೋ ಆ ಆಫಿಸರರ ರುಜು.

ಬೆಂಗಳೂರು ವ ಮೈಸೂರು ಪಹರ್‌ಗಳ ಮ್ಯುನಿಸಿಪೆಲ್ ರೆಗ್ಯುಲೇಷನಿನ 58ನೇ ಸೆಕ್ಷನ್ ಅನುಸರಿಸಿ ರಿಜಿಸ್ಟರ್ ಮಾಡಿದಬ್ಗ್ಯೆ ಸರಟಫಿಕೇಟ್

ತಾರೀಖು ನೇ

ಪ್ರೆಸಿಡೆಂಟ್ (ಅಥವಾ ವೈಸ್ ಪ್ರೆಸಿಡೆಂಟ್)
ಮ್ಯುನಿಸಿಪಾಲಿಟಿ.

ತಾರೀಖು 5ನೇ ಜೂ ೧೮೮೯.

ನಂ. 60.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದ ದಿನದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ಯಾ ಲ್ಟಿಟ್ಟರುನ ತಾಲೂಕಿಗೆ ಕಂಡ ಜೋಡೀ ಗ್ರಾಮವು ಇದರಿಂ ಕಂಡ ತಹಶೀಲ್ದಾರಿಯಲ್ಲಿ ಸಮೂಹದಿರುವ ಸ್ಥಳದಲ್ಲಿ ವ ವಾದ ಹರಾಜು ನೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಪ ಯಾವದೂ ಇಲ್ಲದೆ ಗ್ರಾಮವು ಚಡವರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ದ್ರವ್ಯವು ಬೇರೆಬೇರೆಯಾಗಿ ಮುಜಾರ್ತ್ಮಾಡಲ್ಪಟ್ಟು ವೃತ್ತಿಗಳನ್ನಾಗಿ ವಿಂಗಡಿಸಲ್ಪಟ್ಟಿದ್ದು ನರವರು ತಮ್ಮ ಯಜ್ಞಾರೀ ಮೇಲೆ ಪೂರಾ ಹಣವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಗೆ ಹರಾಜು ಕೂಗಿಸುವರು.

3. ಕ್ರಯಹಾರನು ಪರಾಜು ಕಾಲದಲ್ಲಿ ಕ್ರಯದ ಪೊಲಗ ದೈಕಿ ಕೇವಲ 25 ರೂಪಾಯಿ ದುಡ್ಡು ಕ್ರಯದ ಮೊಬಲಗ ದೈಕಿ ಜಾಕಿಯನ್ನು ಪರಾಜು ತಾರೀಖು ಆಗಾಯತು 15 ದಿನಗಳೊಳಗಾಗಿ ಪೂರತಿ ಮೊಬಲಗು ದಂಡವಾಗಿ ತೆಗಪುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಸಿಟ್ ಮೊಬಲಗನ್ನು ಕೊಸದೆ ಜೋಪರೆ, ಅಥವಾ ಚಾಕಿ ಕ್ರಯದ ಮೊಬಲನ ನುಗಳು ಅವ್ವಲ್‌ಕ್ರಯದಾರನ ಖಿರ್ದಿನಲ್ಲಿ ವ ನುಕ್ಸಾನಾಗಿ ಮುಗಿ ಪರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯ ದರಖಾಸ್ತು ಮಾಡುತ್ತಾರೆಯೋ ಎಂಬುವನ್ನು ನಮೂದಿಸತಕ್ಕದ್ದು. ಮುತವಲೀಕರಾಗಿದ್ದ ಪಕ್ಷಕ್ಕೆ ತಮ್ಮ ಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜಿರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಆ ಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನನಲ್ಲಿ ತನಗೆ ಹಕ್ಕುಂಟಿಲ್ಲ ಇತರ ಯಾವ ಮನುಷ್ಯನಾಗಲಿ, ಪರಾಜು ಆಗುವದಕ್ಕೆ ಮುಂಚಿತವಾಗಿ ಬಿಡ್ಡಿ ಯಾ ಇತರ ಖರ್ಚುಗಳು ಜೇಬೀಲ್ ಕಂದಾಯದ ಬಾಕಿ ಪೊಲಗನ್ನು ಪೂರಾ ಹಾಜರ್ ಮಾಡಿದ್ದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಖಾನತೀಯಾಗಿರುತ್ತೆಂ ದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮುಜಾರ್ತ್ಮಾಡಲ್ಪಟ್ಟಿರುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾದ್ದಾಗಿರಲಾರದಿಲ್ಲವು.

8. ಕ್ರಯಹಾರನು ಕ್ರಯದ ಮೊಬಲನ್ನು ಪೂರ್ತಿಯಾಗಿ ಸಂದಾಯ ಮಾಡಿದ ಹರಾಜನ್ನು ದಿಕ್ಷಾನರವರು ಖಾಯಂ ಮಾಡಿದ ಕೂ ಹ್ಲೆ ಗ್ರಾಮವು ಆತನ ಸುಪರ್ದಿಗೆ ಮಾಡಲ್ಪಟ್ಟು ಕ್ರಯಕಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ರಿಜಿಸ್ಟ್ರಿಯ ಕಮ್ಮಿಸರವರಿಂದ ರುಜು ಮೊ ಹರ್ ಮಾಡೋಸಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತದನಂತರ್ಯಾಗಲಿ ಅಂದಾಜು ಬೀಜವೇ ಮಹಜರ್ಯಾಗಲಿ ಹರು ವ ದಲ್ಲತ್ತಾಗಲಿಗೆ ಸರಕಾರವೆವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾನ ಪಟ್ಟುಂತೆ ಎನಿಸುವ ಜನಗಳು ಪರಾಜು ತಾರೀಖು ಆಗಾಯತು 30 ದಿನಗಳೊಳಗಾಗಿ ದಿವಾನ ರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಾಗುತ್ತಾರೆ ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು. ತಾಲ್ಲೂಕು. ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀ ಜವರೀ.	ಅಂದಾಜು ಪುರಸ್ಕಾರಕ್ಕೆ ಕೊ ಟ್ಟುವೇ ಯಾಡಬೇಕಾದ ಕ್ಯಿ ದೇಲಾಜು.	ಸಾಲಿಯಾನಾ ಸ ರ್ಕಾರ ಕಂದಾಯ ಟೆರೆಂಟ್.	ಯಾವ ತಾಕೀತಿನೊ ಸ್ತರ ಗ್ರಾಮವು ಹರಾಜಿ ಮಾಡಲ್ಪ ಡುತ್ತೋ ಅಂಥಾ ಸ ರಕಾರದ ಕಂದಾಯ ಪ ಬಾಕೀ.	ಹರಾಜು ತಾರೀಖು ಪಗೈರೇ.
ಮೈಸೂರು. ನಂಜನಗೂಡು. ತಾಯೂರು.	ಜೋಡಿ ಯಿಗ್ಗಲಿ.	1. ನರವೆರಾಜಸ್ವಾಮಿ ಡೇವರು 2. ತ್ರಿಣೇಶ್ವೇಶಸ್ವಾಮಿ ಡೇವರು ಮತ್ತು ಯಿತರ 23 ಮಂದಿ.	ಖಂ. ಕೂ. ಪ. 0 0 0	ರೂ. ಆ. ಪೈ. 573 0 0	ರೂ. ಆ. ಪೈ. 6527 0 0	ರೂ. ಆ. ಪೈ. 1068 9 0 ಮತ್ತು ಬಡಿ	ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರ ಕೂಟರೂ ಮುಂದಿನ ಶಿಂಗಳು 10ನೇ ತಾರೀಖಿನಲ್ಲಿ.

ಸೂರಾ.—ಜೋಡಿಸ್ವಾದಕಗಳಿಂದಲಾಗಲಿ, ಬಾಳ್ವೆತೆಯ ಮೂಲಕ ಯಿವರುಗಳಿಗೆ ಹಿಂದೆ ಯಿಜ್ಜವರಿಂದಾಗಲಿ, ಉಂಟುಮಾಡಲ್ಪಟ್ಟ ತ ಕಾಂ ಹಿಜಿಸಿಹೊಳಿಗಳಿಗೂ, ದೇಣಿಗೆಗಳಿಗೂ ಮತ್ತು ಹಳ್ಳಿ ಹಾಗೂ ಅಥವಾ ಮತ್ಯಾವ ಸಂಸ್ಥಾನಗಳಿಗೂ ಸದರೀ ಹರಾಜು ಬಳಪಟ್ಟಿರುವದಿಲ್ಲ.

ತಾರೀಖು 28ನೇ ಮೇ ೧೮೮೯.

ನಂ. 61.—ತುಮಕೂರು ಡಿಸ್ಟ್ರಿಕ್ಟು ಟ್ರೆಜರೀ ಆಫೀಸ್ಪೆಂಟ್ ಕಮ್ಮಿಸರ್ ಮೆ|| ಜೆಚ್. ನಂಜುಂಡಶಾಜೀ ಅಯಿಸವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಆಗಾಯತು ಬಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತುಮಕೂರು ತಾಲ್ಲೂಕು ಅಮಲ್ದಾರ್ ಹೇಮಾ ಹನುಮಂತಯ್ಯನವರು, ತಮ್ಮ ಅಮಲ್ದಾರಿ ಕೆಲಸಡೊಡನೆ ತುಮಕೂರು ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನು, ಮೆ॥ ನಂಜುಂಡದಾಜೇ ಅರಸಿನವರ ಗೈರ್ ಹಾಜರಾಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ವಹಿಸಿರತಕ್ಕದ್ದು.

ತಾರೀಖು 31ನೇ ಮೇ 1889.

ನಂ. 67.—ನ್ಯೆಸೂರು 2ನೇ ಗ್ರೇಡ್ ಅಸಿಸ್ಟೆಂಟ್ ಸರ್ಜಿರ್ಯರಾದ ಮೆ॥ ಜಿ. ಪಿ. ಕಾಸ್ಟೆಲೋಯವರು, 1889ನೇ ಇಸವಿ ಮೇ 5ನೇ ತಾರೀಖು ಲಾಗಾಯತು 1ನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 7ನೇ ಜೂ೯ 1889.

ನಂ. 62.—ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ನಂಜುಂಡರಾಜೆ ಅರಸಿನವರು ತುಮಕೂರು ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನು 1889ನೆ ಇಸವಿ ಮೇ 31ನೇ ಮಧ್ಯಾಹ್ನದಲ್ಲಿ ತುಮಕೂರು ತಾಲ್ಲೂಕು ಅಮಲ್ದಾರ್ ಹೇಮಾ ಹನುಮಂತಯ್ಯನವರಿಗೆ ಒಪ್ಪಿಸಿರತ್ತಾರೆ.

ತಾರೀಖು 8ನೇ ಜೂ೯ 1889.

ನಂ. 63.—ಕಡೂರು ಡಿಸ್ಟ್ರಿಕ್ಟ್ ಆಕ್ಟಿಂಗ್ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಪಿ. ಆರ್. ಡಬ್ಲ್ಯೂ. ವೆದರಾಲ್ ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿನಗಳ ಪರೀಕ್ಷಾ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 10ನೇ ಜೂ೯ 1889.

ನಂ. 65.—ಮೈಸೂರು ಸಿವಿಲ್ ಆಸ್ಪತ್ರಿಯಲ್ಲಿ ಕೆಲಸನೋಡುತ್ತಲಿರುವ ಅಸಿಸ್ಟೆಂಟ್ ಸರ್ಜಿರ್ಯ ಜೆ. ಜಿ. ನೊರಾನ್ಹಾಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. 66.—ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಿವಿಲ್ ಸರ್ಜಿರ್ಯರಾದ ಮೆ॥ ಡಿ. ಜೋಕ್ಸಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 30 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. 68.—ಸ೯ 1889ನೇ ಇಸವಿ ಮೇ 6ನೇ ಮಧ್ಯಂ 29ನೇ ನಂಬರುಳ್ಳ ಇಸ್ತಿಹಾರ್‌ನಾಮೆಯನ್ನನುಸರಿಸಿ, ಹುಣಸೂರು ತಾಲ್ಲೂಕು ಪೊಲೀಸ್ ಇನ್‌ಸ್ಪೆಕ್ಟರಾದ ಮೊಹದೀ ಷರೀಫ್‌ಯವರು, ವಿಸಾರ್ ಕಮಾಲುದ್ದೀ ಖಾನರವರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಪುಣಸೂರು ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಯಾಸ್ ಮಾಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 3ನೇ ಜೂ೯ 1889.

ನಂ. 70.—ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಜಂಗಲಿಗಳಲ್ಲಿ ಸುಡಲ್ಪಡುವ ಯಿದ್ದಲಿನ ಮೇಲೆ ವಸೂಲ್ಮಾಡಲ್ಪಡಬೇಕಾದ ತೀರ್ವೇದರಗಳನ್ನು ವಿವರಿಸುವ 1887ನೇ ಇಸವಿ ಡಿಸಂಬರ್ 20ನೇ ಮಧ್ಯಂ 177ನೇ ನಂಬರ್‌ವುಳ್ಳ ಇಸ್ತಿಹಾರ್‌ನಾಮೆಯ 9ನೇ ಕಲಮಿನಲ್ಲಿ "ಕಂದಾಯ ತೆರುವ ರೈತರು" ಮಂಬದಾಗಿ ಆರಂಭಿಸಿ "ಬದಸ್ತೂರ್ ಗುರಿಯಾಗಿರತಕ್ಕದ್ದು" ಯಂಬದಾಗಿ ಆಖೈರಾಗುವ ವಾಕ್ಯದಲ್ಲಿ ಕಂಡ ಮಾತುಗಳು ಬಿಡಲ್ಪಟ್ಟು ಅದಕ್ಕೆ ಬದಲಾಗಿ ಇದರಡಿ ಬರುವದು ಕೇರಿಸಲ್ಪಡತಕ್ಕದ್ದು, ಯೇನಂದರೆ:—

"ಮೇಲ್ಕಂಡ ರೂಲ್ಸು, ಕಂದಾಯ ತೆರುವಂಥಾ ರೈತರು, ಮೆಟ್ಟು ಮೊಹತರ್ಫಾ ತೆರುವಂಥಾ ಸುಂಣ ಸುಡುವರು ಮತ್ತು ಯಿದ್ದಲು ಸುಡುವರು, ಖಬ್ಬಿಣ ಕರಿಗಿಸುವಂಥಾವರು ಯಾ ಲೋಹಾರರು ಯಿವರುಗಳು ಯಿದ್ದಲು ಸುಡುವ ಬಗ್ಯಾಗಿ ನಾದೇಯನ್ನು ಮುಳತ್ತಾಗಿ ಪಡೆಯುವ ಹಾಲಿ ಜಾರಿಯಲ್ಲಿರುವ ರಿಯಾಯತಿಗಳಿಗೆ ಲಗಾವಾಗುವದಿಲ್ಲಪ್ಪಿ. ಮೊಹತರ್ಫಾ ಕಂದಾಯ ತೆರುವಂಥಾ ಸುಂಣದ ಗೊಡು ಮತ್ತು ಯಿದ್ದಲು ಸುಡುವವರು, ಖಬ್ಬಿಣ ಕರಗುವರು ಯಾ ಲೋಹಾರರು ಯಿವರುಗಳು (ಪರಂತು ಕಂದಾಯ ತೆರುವಂಥಾ ರೈತರುಗಳು ವಿನಾ) ಯಿದ್ದಲು ಸುಡುವವರಿಗ್ಯೂ ಸಾದೆಯನ್ನು ಕತ್ತಶಿಸುವ ಬಗ್ಯೂ ಮೊಹೀರ ರಪದಾರಿಯೆನ್ನು ಪಡೆಯಲಿಕ್ಕೂ ಮತ್ತು ಅಂಥಾ ಲೈಸೆನಿನ ಷರತ್ತುಗಳ ಪ್ರಕಾರ ನಡೆದುಕೊಳ್ಳುವದಕ್ಕೂ ಬದ್ಧರಾಗಿರತಕ್ಕದ್ದು. ಮೇಲ್ಕಂಡ ರಿಯಾಯಿತಿಯು, (ಲೈಸೆನ್ಸು ಯಿಲ್ಲದೆಯೇ ರೈಹರು ಮುಖ್ಯತ್ವಾಗಿ ನಾಧಿಪಡೆಯುವ ಹಕ್ಕು ಪೇಬೀಲ್) ಪುರುಷಯೋಗ ಪಡಿಸಲ್ಪಟ್ಟಾಗ ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು.

ತಾರೀಖು 11ನೇ ಜೂ೯ 1889.

ನಂ. 71.—ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಸರ್ವೇಯರ್ ಮೆ॥ ಬಿ. ಶ್ರೀನಿವಾಸಾಯ್ಯರಿಗೆ, 1889ನೇ ಇಸವಿ ಏಪ್ರಿಲ್ 17ರಲಾಗಾಯತು 10 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 1ನೇ ಜೂ॥ 1889.

ನಂ. 64.—ಇದರಡಿ ಕಂಡ ನಿಬಂಧನೆಯು, ಮೈಸೂರು, ಕಡೂರು, ಚಿತ್ರದುರ್ಗ, ಹಾಸನ, ತುಮಕೂರು, ಮತ್ತು ಕೋಲಾರ ಈ ಡಿಸ್ಟ್ರಿಕ್ಟುಗಳ ಡಿಸ್ಟ್ರಿಕ್ಟು ಜಂಗಲ್‌ಗಳಲ್ಲಿ ಕಡಿಯಲ್ಪಡುವ ಯಾ ಸುಡಲ್ಪಡುವ ಸಾದೆ ಮತ್ತು ಇದ್ದಲು ಇವುಗಳ 'ಮೇಲೆ ವಸೂಲ್ ಮಾಡಲ್ಪಡಬೇಕಾದ ಸೀನಿಯೂರೇಜ್' ಯಾನೇ ತೀರ್ವೆಗೆ ಸಂಬಂಧಪಟ್ಟ ನಿಬಂಧನೆಗಳನ್ನು ವಿವರಿಸುವಂಥ 1888ನೇ ಇಸವಿ ಆಗಸ್ಟು 13ನೇ ಮಾರ್ಕ್ಕಂ 112ನೇ ನಂಬರು, 1888ನೇ ಇಸವಿ ಆಗಸ್ಟು 13ನೇ ಮಾರ್ಕ್ಕಂ 113ನೇ ನಂಬರು, ಅದೇ ಇಸವಿ ಸಪ್ಟಂಬರ್ 10ನೇ ಮಾರ್ಕ್ಕಂ 127ನೇ ನಂಬರು, ಅದೇ ಇಸವಿ ಡಿಸಂಬರ್ 18ನೇ ಮಾರ್ಕ್ಕಂ 161ನೇ ನಂಬರು, ಮತ್ತು 1889ನೇ ಇಸವಿ ಜನವರಿ 28ನೇ ಮಾರ್ಕ್ಕಂ 195ನೇ ನಂಬರು, ಈ ನಂಬರುಗಳ ಇಸ್ತಿಹಾರ್‌ನಾಮೆಯ 10ನೇ ಕಲಮಿಗೂ ಮತ್ತು 1888ನೇ ಇಸವಿ ಅಕ್ಟೋಬರ್ 25ನೇ ಮಾರ್ಕ್ಕಂ 1483ನೇ ನಂಬರ್‌ವುಳ್ಳ ಇಸ್ತಿಹಾರ್‌ನಾಮೆಯ 9ನೇ ಕಲಮಿಗೂ ಬದಲಾಗಿ ಸೇರಿಸಲ್ಪಡತಕ್ಕದ್ದು:—

"ಈ ನಿಬಂಧನೆಗಳು, ಸೀನಿಯೂರೇಜ್ ತೀರ್ವೆಯನ್ನು ವಿಧಿಸುವವ್ಯರ ಮಟ್ಟಿಗೆ, ಕಂದಾಯ ತೆರುವಂಥಾ ರೈತರು ಮತ್ತು ಪೊಡ ತರ್ಫೂ ಸೆರಿಗೆ ತೆರುವಂಥಾ ಕಬ್ಬಿಣ ಕರಗಿಸುವವರು ವ ಲೋಹಾರ್ ಇವರುಗಳು ವಾಸ್ತವ್ಯವಾಗಿ ಅವರ ಸ್ವಂತ ಕೆಲಸಕ್ಕೋಸ್ಕರ ಸಾದೆ ಯಾ ಇದ್ದಲನ್ನು ಮುಫತ್ತಾಗಿ ಪಡೆದುಂಥಾ ಹಾಲಿ ಜಾರಿಯಲ್ಲಿರುವ ಹಕ್ಕುದಾರಿಗಳಿಗೆ ಲಗಾವಾಗುವದಿಲ್ಲವು. ಪೊಹತರ್ಫೂ ತೆರಿಗೆ ತೆರತಕ್ಕಂಥಾ ಕಬ್ಬಿಣ ಕರಗಿಸುವರು ಮತ್ತು ಲೋಹಾರರು (ಪರಂತು ಕಂದಾಯ ತೆರತಕ್ಕಂಥಾ ರೈತರು ವಿನಾ) ಸಾದೆಯನ್ನು ಕಡಿಯುವ ಬಗ್ಯಾಗಲಿ ಯಾ ಇದ್ದಲು ಸುಡುವ ಬಗ್ಯಾಗಲಿ ಮಾಫೀ ಲೈಸೆನ್ಸುಗಳನ್ನು ಪಡೆಯುವದಕ್ಕೂ ಮತ್ತು ಅಂಥಾ ಲೈಸೆನ್ಸುಗಳ ಷರ್ತುಗಳ ಪ್ರಕಾರ ನಡದುಕೊಳ್ಳುವದಕ್ಕೂ ಬದ್ಧರಾಗಿರತಕ್ಕದ್ದು. ಮುಫತ್ತಾಗಿ ಪಡೆದುಕೊಂಡ ಸಾದೆ ಅಥವಾ ಇದ್ದಲು ಬಿಕರೀ ಮಾಡಲ್ಪಡಕೂಡದು, ವಿನ್ಯಯ ಮಾಡಲ್ಪಡಕೂಡದು ಅಥವಾ ವ್ಯಾಪಾರೆ ಕೆಲಸಕ್ಕಾಗಿ ಅನ್ಯಥಾ ಉಪಯೋಗಿಸಲ್ಪಡಕೂಡದು. ರೈತರುಗಳು ಬಗರಲೈಸೆನ್ಸಿನಿಂದ ಮುಫತ್ತಾಗಿ ಸಾದೆ ಮತ್ತು ಇದ್ದಲು ಪಡೆಯಬಹುದಾದ ಹಕ್ಕುದಾರಿ ದೇಖಿಲ್ ಈನಿಬಂಧನೆಯಲ್ಲಿ ನಮೂದು ಮಾಡಲ್ಪಟ್ಟ ಹಕ್ಕುದಾರಿಗಳು ದುರುಪಯೋಗ ಪಡಿಸಲ್ಪಟ್ಟಾಗ ರದ್ದು ಮಾಡಲ್ಪಡಲಿಕ್ಕೆ ವಳಪಟ್ಟಿರತಕ್ಕವು".

ಬಿಮೋಜೇಬ್ ಹುಕುಂ,

ಆರ್. ವಿಜಯೀಂದ್ರರಾವ್,

ಜೇಫ್ ಸೆಕ್ರಿಟರಿ.

ಪಬ್ಲಿಕ್‌ವರ್ಕ್ಸ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 8ನೇ ಜೂ॥ 1889.

ನಂ. 2198—316.—ಸ್ಯಾನಿಟರೀ ಇಂಜನೀರ್ ಮೆ॥ ಸ್ಟ್ಯಾಂಡಿಷ್ ಲೀಯವರಿಗೆ 1889ನೇ ಇಸವಿ ಜನವರಿ 11ನೇ ಮಾರ್ಚು ತಿನ 184—48ನೇ ನಂಬರ್ ಇಸ್ತಿಹಾರಿನಿಂದ ಕೊಡೋಣಾಗಿದ್ದ ಪ್ರಿವಿಲೀಜ್ ರಜಾ ಪೂರೈಸಿ ,ಸದರೀಯವರು ಮೈಸೂರ ಸ್ಪೆಷಿಯಲ್ ಯಿಂಪ್ರೂವ್‌ಮೆಂಟ್ ಪಿವಿಜನಿನ ಚಾರ್ಜನ್ನ ಯಗ್ಜಿಕ್ಯೂಟಿವ್ ಇಂಜನೀರ್ ಮೆ॥ ಯಫ್. ಜೇ. ಮೆಕ್‌ಲಾರ್ಲಿಯವರಿಂದ ಮಾಹೆಶ್ವರಮಜಕೂರ 4ನೇ ತಾರೀಖಿನ ಪೂರ್ವಾನ್ಹದಲ್ಲಿ ಪಹಿಸಿರುತ್ತಾರೆ.

ಹುಕ್ಕುಂ ಬಮೋಜೇಬ್,

ಸಿ. ಪೋರ್ಟ್ ಲೆ॥ ಕರ್ನಲ್ ಆರ್. ಇ.

ಸೆಕ್ರಿಟರಿ ಮೈಸೂರು ಗವರ್ಮೆಂಟ್.

ವಿದ್ಯಾಭ್ಯಾಸದ ಇಲಾಖೆ.

ಸ॥ 1889ನೇ ಇಸವಿ ಮೇ ತಾರೀಖು 6.

ಮೈಸೂರು ದೇಶೀ ಪರೀಕ್ಷೆ.

ಸ॥ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಗೋಸ್ಕರ ಈ ಕೆಳಗೆ ನಮೂದಿಸಲ್ಪಟ್ಟಂತೆ ಬಹುಮಾನಗಳು ಚಿಂತಾಮಣೀ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲ್ ಹೆಡ್ ಮಾಸ್ಟರಾದ, ಆಳಂಗ್ಯಾಚಾರ್ಯರಿಂದ ಕೊಡಲ್ಪಡುವವು:—

(i) ಸಿಲ್ಲಫೋಟ್ಟ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲಿನಲ್ಲಿ ತೇರ್ಗಡೆ ಹೊಂದುವವರ ಪೈಕಿ 'ಕನ್ನಡ ಭಾಷಾ ಗ್ರಂಥಗಳಲ್ಲಿ' ಅಧಿಕವಾದ ನಂಬರುಗಳನ್ನು ಪಡೆಯುವಂಥಾ ದೇಶೀ ಪರೀಕ್ಷಾ ವಿದ್ಯಾರ್ಥಿಗೆ 'ಕನ್ನಡ ಸಟೀಕಾ ಗುರುಬಾಲಪ್ರಬೋಧಿಕ'

(ii) ಸಿಲ್ಲಫೋಟ್ಟ ತಾಲ್ಲೂಕು ಗವರ್ಮೆಂಟು ಕನ್ನಡ ಸ್ಕೂಲಿನಲ್ಲಿ ತೇರ್ಗಡೆ ಹೊಂದುವವರ ಪೈಕಿ 'ಗಣಿತದಲ್ಲಿ' ಅಧಿಕವಾದ ನಂಬರುಗಳನ್ನು ಪಡೆಯುವಂಥಾ ದೇಶೀ ಪರೀಕ್ಷಾ ವಿದ್ಯಾರ್ಥಿಗೆ.— 'ಅಪ್ಪಾಬಕವರ್ ಕನ್ನಡ ಮಹಾಭಾರತ ಮೂಲ.'

(iii) ಸಿಲ್ಲಫೋಟ್ಟ ತಾಲ್ಲೂಕು ಗವರ್ಮೆಂಟು ಕನ್ನಡ ಸ್ಕೂಲಿನಲ್ಲಿ ಉಪಾಧ್ಯಾಯರ ಪರೀಕ್ಷೆಯಲ್ಲಿ ತೇರ್ಗಡೆಯಾಗುವವರ ಪೈಕಿ 'ಶಾಸ್ತ್ರದಲ್ಲಿ' ಅಧಿಕವಾದ ನಂಬರುಗಳನ್ನು ಪಡೆಯುವಂಥಾವರಿಗೆ.— 'ಮೂವ್ವತ್ತನಾಲ್ಕು ಸಂಧಿಗಳುಳ್ಳ ಸಟೀಕಾ ಕನ್ನಡ ಜೈಮಿನಿ ಭಾರತ.'

ಎಲ್. ರೈಸ್,

ಎಜ್ಯುಕೇಷನ್ ಸೆಕ್ರಿಟರಿ.